ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYA PRAGATHI Kannada daily

SP NEWS ಡಿಜಿಟಲ್ ನ್ಯೂಸ್ ಕಹಾನಿ

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 Issue: 183 Date: 12-08-2026 Wednesday RNI NO: KARKAN/2021/80805 L2/RNP-1285/TMR/2025-27 Page: 4 Price: 1.00

ಸಂಪುಟ: 05 ಸಂಚಿಕೆ: 183 ಪುಟ : 4 ಬೆಲೆ: 1.00 ರೂ

## ‘ವಿಬಿಜಿರಾಮ್‌ಜಿ ಯೋಜನೆಯಡಿ ಉದ್ಯೋಗ ನೀಡಿ ; ಜನರು ಗುಳೆ ಹೋಗುವುದನ್ನು ತಪ್ಪಿಸಿ; ಡಿಸಿಎಂ ಪರಮೇಶ್ವರ್

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜಿಲ್ಲೆಯಲ್ಲಿ ವಿಬಿ ಜಿ ರಾಮ್ ಜಿ ಯೋಜನೆಯಡಿ ಉದ್ಯೋಗ ನೀಡಿ, ವಲಸೆ ಹೋಗುವುದನ್ನು ತಪ್ಪಿಸಬೇಕು. ಕೂಲಿ ಮಾಡಿದವರಿಗೆ ತ್ವರಿತಗತಿಯಲ್ಲಿ ಏಳು ದಿನದ ಒಳಗಾಗಿ ಹಣ ಪಾವತಿಸಬೇಕು. ಕೂಲಿ ಹಣ ಪಾವತಿಸಲು ವಿಳಂಬವಾದರೆ ಉದ್ಯೋಗ ನೀಡಿಯೂ ಉಪಯೋಗವಿಲ್ಲದಂತಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ: ಜಿ.ಪರಮೇಶ್ವರ ತಿಳಿಸಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಂಗಳವಾರ ವಿಧಾನಸೌಧದಲ್ಲಿ ರಾಜ್ಯದ ಎಲ್ಲ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರೊಂದಿಗೆ ನಡೆಸಿದ ವೀಡಿಯೋ ಸಂವಾದದಲ್ಲಿ ಕುಣಿಗಲ್ ತಹಶೀಲ್ದಾರ್ ಅವರ ಕಚೇರಿಯಿಂದ ಭಾಗವಹಿಸಿ ಮಾತನಾಡಿದ ಅವರು ಬಡವರು ಉದ್ಯೋಗಕ್ಕಾಗಿ ಎಲ್ಲಿಗೆ ಹೋಗುತ್ತಾರೆ? ಉತ್ತರ ಕರ್ನಾಟಕ ಭಾಗದಲ್ಲಿ ಜನ ಗುಳೆ ಹೋಗುತ್ತಿದ್ದಾರೆ. ಕೇಂದ್ರದಿಂದ ‘ವಿಬಿ ಜಿ ರಾಮ್ ಜಿ’ ಯೋಜನೆಯ ಹಣ ಬರುತ್ತಿಲ್ಲ. ಸದ್ಯದ ಪರಿಸ್ಥಿತಿಗೆ ರಾಜ್ಯ ಸರ್ಕಾರವೇ ಹಣ ಭರಿಸುತ್ತಿದೆ. ಉದ್ಯೋಗ ನೀಡಿದರೆ ಜನರು ಊರು ಬಿಡುವುದನ್ನು ತಪ್ಪಿಸಬಹುದು. ಜನರಿಗೆ ನಾವೇ ಕೆಲಸ ಕೊಟ್ಟು ಊರಿನಲ್ಲಿ ಉಳಿಸಿಕೊಳ್ಳಬೇಕು ಎಂದು ಹೇಳಿದರು.



ಬರದಿಂದ ಹಾನಿಗೊಳಗಾದ ಬೆಳೆ, ಕುಡಿಯುವ ನೀರಿನ ಪರಿಸ್ಥಿತಿಯ ಪರಿಶೀಲನೆ ಕುರಿತು ಜಿಲ್ಲಾ ಪ್ರವಾಸ ಕೈಗೊಂಡಿರುವುದರಿಂದ ಸಂವಾದದಲ್ಲಿ ನೇರವಾಗಿ ಭಾಗಿಯಾಗಲು ಸಾಧ್ಯವಾಗಿಲ್ಲ. ಡಿ.ಕೆ.ಶಿವಕುಮಾರ್ ಅವರು ಸಿಎಂ ಆದ ನಂತರ ಸರ್ಕಾರವನ್ನು ಜನರ ಹತ್ತಿರ ತೆಗೆದುಕೊಂಡು ಹೋಗಿ ಕೆಲಸ ಮಾಡುವುದಕ್ಕೆ ಆದ್ಯತೆ ನೀಡಿದ್ದಾರೆ. ಎಲ್ಲ ಜನಪ್ರತಿನಿಧಿಗಳು ಜನರ ಅಹವಾಲುಗಳನ್ನು ಕೇಳಬೇಕಿದೆ. ಅಧಿಕಾರಿಗಳು ಜನರಿಗೆ ಸ್ಪಂದಿಸುತ್ತಿಲ್ಲ ಎಂಬ ವಿಚಾರಗಳು ಕೇಳಿ ಬಂದ ಹಿನ್ನೆಲೆ ಪ್ರಜಾಸೇವಾ ಇಲಾಖೆಯನ್ನು ಪ್ರಾರಂಭ ಮಾಡಿದ್ದಾರೆ ಎಂದು ಹೇಳಿದರು.

ಪ್ರತಿಯೊಂದು ಜಿಲ್ಲಾ, ತಾಲೂಕು ಮಟ್ಟದಲ್ಲಿ ಅಧಿಕಾರಿಗಳನ್ನು ನಿಯೋಜಿಸಿ, ಜನರು ಸಮಸ್ಯೆಗಳನ್ನು ಆಲಿಸಿ ತ್ವರಿತವಾಗಿ ಪರಿಹಾರ ಕ್ರಮ ಕೈಗೊಳ್ಳುವ ಉದ್ದೇಶದಿಂದ ಪ್ರಜಾಸೇವಾ ಇಲಾಖೆಯನ್ನು ಆರಂಭಿಸಲಾಗಿದೆ. ಜನರು ಗ್ರಾಮೀಣ ಭಾಗದಲ್ಲಿ ಅನೇಕ ಸಮಸ್ಯೆ ಎದುರಿಸುತ್ತಿದ್ದು, ಈಗಲೂ ಸಾಕಷ್ಟು ಜನರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಸವಲತ್ತುಗಳು ನೇರವಾಗಿ ಜನರಿಗೆ ತಲುಪಿಸುವುದು ಪೂರ್ಣಪ್ರಮಾಣದಲ್ಲಿ ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಯಾರ ಹತ್ತಿರ ಹೋಗಬೇಕು ಎಂಬ ಜನರ ಪ್ರಶ್ನೆಗೆ ಪ್ರಜಾಸೇವಾ ಇಲಾಖೆ ಉತ್ತರವಾಗಲಿದೆ ಎಂದರು.

ಈ ವರ್ಷ ಬರದ ಪರಿಸ್ಥಿತಿ ಗಂಭೀರವಾಗಿದೆ. ಸೋಮವಾರ ಪಾವಗಡ, ಶಿರಾ, ಮಧುಗಿರಿ, ಕೊರಟಗೆರೆ ತಾಲೂಕುಗಳಲ್ಲಿ ಬರ ಪರಿಸ್ಥಿತಿಯನ್ನು ಪರಿಶೀಲಿಸಿದ್ದೇನೆ. ರೈತರು ಒಂದು ಎಕರೆ ಶೇಂಗಾ ಬಿತ್ತನೆಗೆ 40 ಸಾವಿರ ರೂ. ಖರ್ಚು ಮಾಡಿದ್ದಾರೆ. ಅವರಿಗೆ ಒಂದು ರೂ. ವಾಪಸ್ ಬರುವ ಸಾಧ್ಯತೆ ಇಲ್ಲ. ಫಲವತ್ತಾದ ಮಣ್ಣಿನಲ್ಲಿ ಬೆಳೆದ ಅಡಿಕೆ ಬೆಳೆ ನೀರಿನ ಕೊರತೆಯಿಂದ ಸಂಪೂರ್ಣವಾಗಿ ಒಣಗುತ್ತಿವೆ. ಹೀಗಾಗಿ ರೈತರ ಸಂಕಷ್ಟದ ಸಂದರ್ಭದಲ್ಲಿ ಅವರ ನೆರವಿಗೆ ನಿಲ್ಲುವುದು ನಮ್ಮ ಆದ್ಯ ಕರ್ತವ್ಯ ಎಂದು ಹೇಳಿದರು.

ಮಳೆಯ ಕೊರತೆಯಿಂದ ಜಿಲ್ಲೆಯಲ್ಲಿರುವ ಬೋರ್‌ವೆಲ್‌ಗಳು ಬತ್ತಿ ಹೋಗುತ್ತಿವೆ. ಸಾವಿರ ಅಡಿ ಕೊರೆಸಿದರೂ ಕೊಳವೆ ಬಾವಿಗಳಲ್ಲಿ ನೀರು ಸಿಗುತ್ತಿಲ್ಲ. ಈ ಎಲ್ಲ ಸಮಸ್ಯೆಯನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಸರ್ಕಾರ ನಿಮ್ಮ ಜೊತೆಗಿದೆ ಎಂದು ಜನರಿಗೆ ಭರವಸೆ ನೀಡಿದ್ದೇನೆ. ಜಾನುವಾರುಗಳಿಗೆ ಮೇವಿನ ಸಮಸ್ಯೆ ಎದುರಾಗುತ್ತಿದೆ. ತುಮಕೂರು ಹಾಲು ಉತ್ಪಾದಕರ ಒಕ್ಕೂಟದ ವತಿಯಿಂದ ಜಿಲ್ಲೆಯಾದ್ಯಂತ ರೈತರಿಗೆ ಒಂದು



ಲಕ್ಷ ಕ್ವಿಂಟಾಲ್ ಮೇವಿನ ಬೀಜ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ನೀರಿನ ಸೌಲಭ್ಯ ಇರುವ ರೈತರು ಮೇವು ಬೆಳೆಯುತ್ತಾರೆ. ಹೆಚ್ಚು ಮೇವು ಬೆಳೆದ ರೈತರಿಂದ ಖರೀದಿಸಲಾಗುವುದು. ಪಶು ಸಂಗೋಪನಾ ಇಲಾಖೆಯಿಂದ ಮೇವಿನ ಬೀಜ ವಿತರಿಸಲು ಈವರೆಗೂ ಟೆಂಡರ್ ಕರೆದಿಲ್ಲ. ಈ ಬಗ್ಗೆ ಅಧಿಕಾರಿಗಳು ಶೀಘ್ರದಲ್ಲಿ ಕ್ರಮ ವಹಿಸಬೇಕು ಎಂದು ಸಿಎಸ್ ಶಾಲಿನಿ ರಜನೀಶ್ ಅವರಿಗೆ ಸೂಚನೆ ನೀಡಿದರು.

ರಾಜ್ಯದಲ್ಲಿ ರೈತರಿಗೆ ವಿಮಾ ಹಣ ನೀಡುತ್ತಿಲ್ಲ. ಹಣ ಕಟ್ಟಿಸಿಕೊಳ್ಳುವಾಗ ತೋರಿಸುವ ಆಸಕ್ತಿ, ಬೆಳೆ ನಷ್ಟದ ಸಂರ್ಭದಲ್ಲಿ ಹಣ ಬಿಡುಗಡೆ ಮಾಡಲು ಆಸಕ್ತಿ ತೋರಿಸುತ್ತಿಲ್ಲ. ಈ ಕುರಿತಂತೆ ವಿಮಾ ಕಂಪನಿಯವರೊಂದಿಗೆ ಸಭೆ ನಡೆಸಬೇಕಾಗುತ್ತದೆ. ಶಿರಾ ತಾಲೂಕಿನಲ್ಲಿ ಬೇಸಿಗೆಯಲ್ಲಿ ಸುರಿದ ಅಕಾಲಿಕ ಮಳೆಯಿಂದ ದಾಳಿಂಬೆ ಬೆಳೆ ಸಂಪೂರ್ಣ ನಾಶವಾಗಿತ್ತು. ಈವರೆಗೂ ದಾಳಿಂಬೆ ಬೆಳೆ ನಷ್ಟಕ್ಕೆ ಇನ್ಶೂರೆನ್ಸ್ ಕ್ಲಿಯರ್ ಆಗಿಲ್ಲ. ಇದು ರಾಜ್ಯದ್ಯಾಂತ ಇರುವ ಸಮಸ್ಯೆ. ಈ ಬಗ್ಗೆ ಇನ್ಶೂರೆನ್ಸ್ ಕಂಪನಿಯವರೊಂದಿಗೆ ವಿಶೇಷ ಸಭೆ ನಡೆಸುವ ಅಗತ್ಯತೆ ಇದೆ ಎಂದು ಈ ವೇಳೆ ಮುಖ್ಯಮಂತ್ರಿಯವರಿಗೆ ತಿಳಿಸಿದರು.

ರಾಜ್ಯದಲ್ಲಿ ಐದು ಸಾವಿರಕ್ಕು ಹೆಚ್ಚು ಮಳೆ ಮಾಪನ ಕೇಂದ್ರಗಳಿವೆ. ಅದರಲ್ಲಿ 2,500 ಮಳೆ ಮಾಪನ ಕೇಂದ್ರಗಳು ಕಾರ್ಯನಿರ್ವಹಣೆಯಲ್ಲಿವೆ. ಸರಿ ಇಲ್ಲದ್ದು ಕೂಡಲೇ ದುರಸ್ಥಿಗೊಳಿಸಬೇಕು. ಅಗತ್ಯ ಇರುವ ಕಡೆ ಹೊಸದಾಗಿ ಮಳೆ ಮಾಪನ ಕೇಂದ್ರಗಳನ್ನು ಅಳವಡಿಸುವಂತೆ ಸೂಚನೆ ನೀಡಲಾಗಿದೆ. ಸೆಪ್ಟೆಂಬರ್‌ನಲ್ಲಿ ಬರ ಪರಿಸ್ಥಿತಿ ಮತ್ತಷ್ಟು ತೀವ್ರವಾಗುತ್ತದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ರಾಜ್ಯದಲ್ಲಿ ಎಲ್ಲ ಅಧಿಕಾರಿಗಳು ಎಮರ್ಜೆನ್ಸಿ ಎಂದು ಪರಿಗಣಿಸಿ ಕೆಲಸ ಮಾಡಬೇಕಾಗುತ್ತದೆ. ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ನಿಮ್ಮ ಜೊತೆ ನಾವಿದ್ದೇವೆ ಎಂಬ ಭರವಸೆಯನ್ನು ನೀಡುವ ಮೂಲಕ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕೆಲಸ ಮಾಡಬೇಕು ಎಂದು ಸೂಚಿಸಿದರು. 2ನೇ ಪುಟಕ್ಕೆ

## ಬರ ನಿರ್ವಹಣೆಯಲ್ಲಿ ಸರ್ಕಾರ ವಿಫಲ; ಸುರೇಶ್ ಬಾಬು ವಾಗ್ದಾಳಿ

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ : ರಾಜ್ಯ ಕಾಂಗ್ರೆಸ್ ಸರ್ಕಾರ ಬರ ನಿರ್ವಹಣೆ ಯಲ್ಲಿ ವಿಫಲವಾಗಿದೆ ಎಂದು ಜೆಡಿಎಲ್ ಪಿ ನಾಯಕರು ಸುರೇಶ್ ಬಾಬು ಅವರು ಸರ್ಕಾರದ ವಿರುದ್ಧ ವಾಗ್ದಾಳಿ ನಡಸಿದರು.

ಅವರಿಂದು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಉಪಮುಖ್ಯಮಂತ್ರಿ ತುಮಕೂರು ಜಿಲ್ಲೆಯಲ್ಲಿ ಬರ ಅಧ್ಯಯನ ಪ್ರವಾಸ ಕೈಗೊಂಡಿರುವ ಹಿನ್ನೆಲೆಯಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು. ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸದ ಕಾರಣ ಗ್ರಾಮ ಪಂಚಾಯತಿ, ತಾ.ಪಂ., ಜಿ.ಪಂ ಚುನಾವಣೆ ನಡೆಸದೆ ಇರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಅಧಿಕಾರಿಗಳು, ನೌಕರರು ಮಾಡಿದ ವರದಿಯೇ ಬರದ ಲೆಕ್ಕ ಕೊಡುತ್ತಿದ್ದಾರೆ.

ಇದರಿಂದ ಜನ– ಜಾನುವಾರುಗಳಿಗೆ ನೀರು, ಮೇವು ಅವರುಗಳು ಹೇಳಿದಂತೆ ಸಚಿವರುಗಳು ಗಿಣಿಪಾಠ ಹೇಳುತ್ತಿದ್ದಾರೆ ಎಂದು ಆರೋಪಿಸಿದ



ಅವರು ಕೂಡಲೇ ಸ್ಥಳೀಯ ಸಂಸ್ಥೆಯ ಚುನಾವಣೆ ಗಳನ್ನು ನಡೆಸುವಂತೆ ಒತ್ತಾಯಿಸಿದರು.

ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಬರದನಿರ್ವಹಣೆ ಸಮರ್ಪಕವಾಗಿ ನಿಭಾಯಿಸಲಾಗುತ್ತಿದೆ, ಸ್ಕೇರ್ ಸಿಟಿ ಬಗ್ಗೆ ವಾರ ಕ್ಕೊಮ್ಮೆ ಸಭೆ ನಡೆಸಲಾಗುತ್ತಿದೆ, ಸದ್ಯ ಸರ್ಕಾರ ಒಂದು ಕ್ಷೇತ್ರಕ್ಕೆ ಒಂದು ಕೋಟಿ ಅಂತಾ ಬಿಡುಗಡೆ ಮಾಡಿದೆ, ಈ ಹಣ ಮೂಲಭೂತ ಸೌಕರ್ಯ ನಿವಾರಣೆ ಮಾಡಲು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಬಳಸಿಕೊಳ್ಳಲಾಗುವುದು.. 15 ನೇ ಹಣಕಾಸು ಬಾರದ ಹಿನ್ನೆಲೆಯಲ್ಲಿ ಗ್ರಾಪಂ ನಲ್ಲಿ ಕೆಲಸ ಮಾಡಲು ಆಗ್ತಿಲ್ಲ, ಇದೆಲ್ಲವೂ ಕೂಡಲೇ ನಿವಾರಣೆ ಆಗಬೇಕು ಅಂತಾ ಒತ್ತಾಯಿಸಿದರು..

ಅಲ್ಲದೇ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುತ್ತಿಲ್ಲ, ಕೋರ್ಟ್ ನಲ್ಲಿರುವ ಕಾರಣ ನಡೆಸುತ್ತಿಲ್ಲ ಅಂದಿದ್ದಾರೆ, ಕೋರ್ಟ್ ಕೂಡ ಸರ್ಕಾರಕ್ಕೆ ಛೀಮಾರಿ ಹಾಕಿದೆ,ನಾವು ಚುನಾವಣೆ ನಡೆಸಿ ಅಂತಾ ಕೇಳಿದ್ದೇವೆ,ಆದರೆ ಸರ್ಕಾರ ನಡೆಸದೇ ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡಿದ್ದಾರೆ.. ಬಿಬಿಎಮ್ ಪಿ, ಜಿಪಂ ,ತಾಪಂ ಗ್ರಾಪಂ ಚುನಾವಣೆ ನಡೆಸಿಲ್ಲ ಹೀಗಾಗಿ ಹಣಕಾಸು ಸಂಸ್ಥೆಗಳಿಗೆ ಹಣ ಬರುವುದಕ್ಕೆ ಸಮಸ್ಯೆ ಆಗ್ತಿದೆ ಇದಕ್ಕೆ ನೇರಹೊಣೆ ಸರ್ಕಾರ ಎಂದು ಆರೋಪಿಸಿದರು..

ರಾಜ್ಯದಲ್ಲಿ ಬರವಿದ್ದು ಸರ್ಕಾರ ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ, ಕೇವಲ ಸಚಿವ ಸಂಪುಟ ರಚನೆ ಅವರಿಗೆ ಖಾತೆ ಹಂಚಿಕೆ ಮಾಡುವುದರಲ್ಲಿ ಬ್ಯುಸಿಯಾಗಿದೆ. .ರಾಜ್ಯದಲ್ಲಿ ಸುಮಾರು 140–150 ಕ್ಷೇತ್ರದಲ್ಲಿ ಬರಪೀಡಿತ ಪ್ರದೇಶ ಇದೆ,ಈ ಬರಪೀಡಿತ ಕ್ಷೇತ್ರದಲ್ಲಿ ಮೇವು 2ನೇ ಪುಟಕ್ಕೆ

## ’ಇಂದಿರಾ ಕ್ಯಾಂಟೀನ್’ಗಳನ್ನ ಪರಿಶೀಲಿಸಿದ ಆಹಾರ ಸುರಕ್ಷತಾ ಅಧಿಕಾರಿಗಳು

ಬೆಂಗಳೂರು: ನಗರದ ಹಲವು ಸ್ಟಾರ್ ಹೋಟೆಲ್‌ಗಳು ಮತ್ತು ಪ್ರತಿಷ್ಠಿತ ರೆಸ್ಟೋರೆಂಟ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಂಡ ನಂತರ, ಅತ್ಯಂತ ಕಡಿಮೆ ದರದಲ್ಲಿ ಆಹಾರವನ್ನು ಪೂರೈಸುವ ಸರ್ಕಾರದ 'ಇಂದಿರಾ ಕ್ಯಾಂಟೀನ್'ಗಳ ಅಡುಗೆಮನೆಗಳನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು ಮಂಗಳವಾರ ಪರಿಶೀಲನೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂದಿರಾ ಕ್ಯಾಂಟೀನ್‌ಗಳು ಕಾಂಗ್ರೆಸ್ ಸರ್ಕಾರದ ಪ್ರಮುಖ ಯೋಜನೆಯಾಗಿದ್ದು, ಇವುಗಳನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2013 ರಿಂದ 2018 ರವರೆಗಿನ ತಮ್ಮ ಹಿಂದಿನ ಅವಧಿಯಲ್ಲಿ ಪ್ರಾರಂಭಿಸಿದ್ದರು.

ಅಧಿಕಾರಿಗಳ ಪ್ರಕಾರ, ಬೆಂಗಳೂರು ದಕ್ಷಿಣದ ಗೊಟ್ಟಿಗೆರೆ ಮತ್ತು ಬೆಂಗಳೂರು ಉತ್ತರದ ಲಿಂಗರಾಜಪುರದಲ್ಲಿರುವ ಇಂದಿರಾಗಾಂಧಿ ಕ್ಯಾಂಟೀನ್ ಅಡುಗೆಮನೆಗಳಲ್ಲಿ ಶೋಧ ಕಾರ್ಯ ನಡೆಸಲಾಯಿತು.




ಆಹಾರ ಸುರಕ್ಷತೆ ಮತ್ತು ನೈರ್ಮಲ್ಯದ ಮಾನದಂಡಗಳನ್ನು ಕಾಯ್ದುಕೊಳ್ಳಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಆಹಾರ ಸುರಕ್ಷತಾ ಇಲಾಖೆ ಅಧಿಕಾರಿಗಳು ಇತ್ತೀಚೆಗೆ ಬೆಂಗಳೂರಿನಾದ್ಯಂತ ವಿಶೇಷ ತಪಾಸಣೆಗಳನ್ನು ನಡೆಸುತ್ತಿದ್ದಾರೆ. ಆಹಾರ ಸುರಕ್ಷತಾ ನಿಯಮಗಳು ಮತ್ತು ನಿಬಂಧನೆಗಳನ್ನು ಪಾಲಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳು ತ್ರೀ–ಸ್ಟಾರ್ ಮತ್ತು ಫೈವ್–ಸ್ಟಾರ್ ಹೋಟೆಲ್‌ಗಳನ್ನು ಪರಿಶೀಲಿಸುತ್ತಿದ್ದಾರೆ.

ಕಾರ್ಯಾಚರಣೆಯ ವೇಳೆ ಬೆಂಗಳೂರು ನಗರ ಜಿಲ್ಲೆಯ ಒಟ್ಟು 60 ತ್ರೀ ಸ್ಟಾರ್ ಮತ್ತು ಫೈವ್–ಸ್ಟಾರ್ ಹೋಟೆಲ್‌ಗಳನ್ನು ಪರಿಶೀಲಿಸಲಾಗಿದೆ ಹಾಗೂ ಒಟ್ಟು 77 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗಾಗಿ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

## ರೈತರ ಶಾಪ ಅಜ್ಜಯ್ಯನ ಮೂಲಕ ಡಿಕೆಶಿಗೆ ತಲುಪಿ ಗುಬ್ಬಿ ಶಾಸಕರಿಗೆ ಮಂತ್ರಿಗಿರಿ ತಪ್ಪಿದೆ

ವರದಿ ಗುಬ್ಬಿ ಭರತ್

ಗುಬ್ಬಿ: “ತಾಲೂಕಿನ ರೈತರ ಶಾಪ ಅಜ್ಜಯ್ಯನ ಮೂಲಕ ಡಿ.ಕೆ. ಶಿವಕುಮಾರ್ ಅವರಿಗೆ ತಲುಪಿ, ಅದರ ಪರಿಣಾಮವಾಗಿ ಗುಬ್ಬಿ ಶಾಸಕರಿಗೆ ಮಂತ್ರಿಗಿರಿ ಕೈತಪ್ಪಿದೆ. ಹೇಮಾವತಿ ನೀರಿನ ವಿಚಾರದಲ್ಲಿ ರೈತರ ಶಾಪ ಮುಂದೆಯೂ ತಟ್ಟಲಿದೆ” ಎಂದು ಬಿಜೆಪಿ ಮುಖಂಡ ಎಸ್.ಡಿ. ದಿಲೀಪ್ ಕುಮಾರ್ ಆರೋಪಿಸಿದರು.

ಗುಬ್ಬಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. “ತಾಲೂಕಿನ ಜನರು ನಂಬಿಕೆಯಿಂದ ನೀಡಿದ್ದ ಬೀಗದ ಕೈಯನ್ನು ನಿಮ್ಮ ಸ್ವಾರ್ಥಕ್ಕಾಗಿ ಡಿ.ಕೆ. ಶಿವಕುಮಾರ್ ಅವರಿಗೆ ಅಡವಿಟ್ಟು, ಅವರು ಬಂದಾಗ ಪಕ್ಕದಲ್ಲಿಯೇ ಕುಳಿತು ತುಟಿಕ್ ಪಿಟಿಕ್ ಎನ್ನದೆ ಇದ್ದವರು, ಇಂದು ವಿರೋಧಿಸುವ ನಾಟಕ ಮಾಡುತ್ತಿದ್ದಾರೆ. ಈ ಗೋಸುಂಬೆ ರಾಜಕಾರಣ ಬಿಟ್ಟು ನಿಜವಾಗಿಯೂ ತಾಕತ್ತಿದ್ದರೆ ಡಿ.ಕೆ. ಶಿವಕುಮಾರ್ ಅವರ ಮನೆ ಮುಂದೆ ನಿಂತು ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಿ,” ಎಂದು ಸವಾಲು ಹಾಕಿದರು.



ರೈತರ ಹೋರಾಟವನ್ನು ಡೋಂಗಿ ಎನ್ನುವುದು ಸರಿಯಲ್ಲತಾಲೂಕಿನ ರೈತರು ಒಗ್ಗೂಡಿ ಹೋರಾಟ ನಡೆಸಿದಾಗ ಅವರನ್ನು ಡೋಂಗಿ ಹೋರಾಟಗಾರರು, ಕಾಂಜಿಪಿಂಜಿಗಳು ಎಂದು ಕರೆಯುವುದು ಸರಿಯಲ್ಲ. ಹೇಮಾವತಿ ನೀರಿನ ವಿಚಾರದಲ್ಲಿ ಪಕ್ಷಾತೀತವಾಗಿ ಹೋರಾಟ ನಡೆಸಿದ ಹೋರಾಟಗಾರರನ್ನು ಗೌರವದಿಂದ ಕಾಣಬೇಕು ಎಂದು ದಿಲೀಪ್ ಕುಮಾರ್ ಹೇಳಿದರು.

“ಯಾರೋ ನಾಮಕರಣಕ್ಕೆ ಕರೆದರೆ ಅಲ್ಲಿಗೆ ಹೋಗಿ ಆ ಮಗು ನನ್ನದೇ ಎನ್ನುವ ಮನುಷ್ಯ ನೀನು. ನಿನ್ನ ಯೋಗ್ಯತೆ ತಾಲೂಕಿನ ಜನರಿಗೆ ತಿಳಿದಿದೆ,” ಎಂದು ಅವರು ಶಾಸಕ ಎಸ್.ಆರ್. ಶ್ರೀನಿವಾಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರಾಗಿದ್ದಲಿಫ್ಟ್‌ಇರಿಗೇಶನ್‌ಕಾಮಗಾರಿಗಳನ್ನು ತಾವೇ ತಂದ ಯೋಜನೆಗಳೆಂಬಂತೆ ಉದ್ಘಾಟಿಸಿ ಟೇಪ್ ಕತ್ತರಿಸಿದ್ದಾರೆ. ಆದರೆ ಮಂಜೂರಾದ ಕಾಮಗಾರಿಗಳನ್ನು ಇಂದಿಗೂ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ ಎಂದು ಅವರು ಆರೋಪಿಸಿದರು.

“ಡಿ.ಕೆ.ಶಿ. ಮುಂದೆ ನಿಮ್ಮ ವಿರೋಧ ತೋರಿಸಿ”

ರಾಜ್ಯಾದ್ಯಂತ ಹಲವು ಶಾಸಕರಿಗೆ ಮಂತ್ರಿಗಿರಿ ಕೈತಪ್ಪಿದ ಹಿನ್ನೆಲೆಯಲ್ಲಿ ಪ್ರತಿಭಟನೆಗಳು ನಡೆದಿವೆ. ಆದರೆ ಗುಬ್ಬಿಯಲ್ಲಿ ಮಂತ್ರಿಗಿರಿ ಕೈತಪ್ಪಿದ ವಿಚಾರದಲ್ಲಿ ಯಾರೊಬ್ಬರೂ ಪ್ರತಿಭಟನೆಗೆ ಮುಂದಾಗಿಲ್ಲ. ಇದರಿಂದಲೇ ಜನರ ವಿಶ್ವಾಸದಲ್ಲಿ ಬದಲಾವಣೆ ಆಗಿರುವುದು ಗೊತ್ತಾಗುತ್ತದೆ ಎಂದು ದಿಲೀಪ್ ಕುಮಾರ್ ವ್ಯಂಗ್ಯವಾಡಿದರು.

“ಈಗಾಗಲೇ ನಿಮ್ಮ ರಾಜಕೀಯ ಚಲಾವಣೆ ನಿಂತಿದೆ. ರೈತರ ಶಾಪ ತಟ್ಟುತ್ತಲೇ ಇದೆ. ಮೊದಲಿದ್ದ ರಾಜಕೀಯ ಡ್ರಾಮಾ ಕಂಪನಿಯನ್ನು ಈಗ ಗೋಸುಂಬೆ ಬಣ್ಣಕ್ಕೆ ಬದಲಾಯಿಸಿಕೊಂಡಿದ್ದೀರಿ,” ಎಂದು ಅವರು ಟೀಕಿಸಿದರು.

## "ತಾಳ್ಮೆಯಿಂದ" ಇರಬೇಕು ; ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರವಿದೆ; ಸಿಎಂ

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು: ತಮಿಳುನಾಡಿಗೆ 12,000 ಕ್ಯೂಸೆಕ್ ಕಾವೇರಿ ನೀರು ಬಿಡುಗಡೆ ಮಾಡುವಂತೆ ಕರ್ನಾಟಕಕ್ಕೆ ಸಿಡಬ್ಲ್ಯೂಆರ್‌ಸಿ ನಿರ್ದೇಶನದ ಬಗ್ಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದ್ದು, ರಾಜ್ಯದ ರೈತರನ್ನು ರಕ್ಷಿಸುವ ಕರ್ತವ್ಯ ಮತ್ತು ನ್ಯಾಯಾಲಯದ ಆದೇಶಗಳನ್ನು ಪಾಲಿಸುವ ಕರ್ತವ್ಯ ತಮ್ಮ ಮೇಲಿದೆ ಎಂದು ಹೇಳಿದ್ದಾರೆ




ಪರಿಸ್ಥಿತಿಯನ್ನು ಪರಿಶೀಲಿಸಿದ ನಂತರ ಸರ್ಕಾರ ಈ ಬಗ್ಗೆ ನಿರ್ಧರಿಸುತ್ತದೆ ಎಂದು ಹೇಳಿದರು. ನೀರಾವರಿ ಸಚಿವ ರಾಮಲಿಂಗಾ ರೆಡ್ಡಿ ಮತ್ತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಈ ವಿಷಯವನ್ನು ಚರ್ಚಿಸುವುದಾಗಿ ಹೇಳಿದ ಅವರು, ರೈತರು ಮತ್ತು ಸಾರ್ವಜನಿಕರು "ತಾಳ್ಮೆಯಿಂದ" ಇರಬೇಕೆಂದು ಕರೆ ನೀಡಿದರು, ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರವಿದೆ ಎಂದು ಅವರಿಗೆ ಭರವಸೆ ನೀಡಿದರು.

ಮಂಗಳವಾರನವದೆಹಲಿಯಲ್ಲಿ ಸಭೆ ಸೇರಿದ ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯೂಆರ್‌ಸಿ), ಆಗಸ್ಟ್ 12 ರಿಂದ ಮುಂದಿನ 15 ದಿನಗಳವರೆಗೆ 12,000 ಕ್ಯೂಸೆಕ್ (ಪ್ರತಿ ಸೆಕೆಂಡಿಗೆ ಘನ ಅಡಿ) ನೀರು ಬಿಡುಗಡೆ ಮಾಡುವಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಿದೆ.

"12,000 ಕ್ಯೂಸೆಕ್ ನೀರು ಹರಿಸಲು ಆದೇಶ ಬಂದಿವೆ ಎಂದು ನನಗೆ ತಿಳಿದಿದೆ. ನಾನು ನಮ್ಮ ಒಳಹರಿವಿನ ಮೇಲ್ವಿಚಾರಣೆಯನ್ನೂ ಮಾಡುತ್ತಿದ್ದೇನೆ. ನಮ್ಮ ಪರಿಸ್ಥಿತಿಯನ್ನು ಪರಿಗಣಿಸಿ, ನಮ್ಮ ರೈತರನ್ನು ರಕ್ಷಿಸುವ ಕರ್ತವ್ಯ ನನಗಿದೆ. ನಾವು ನಮ್ಮ ರೈತರನ್ನು ರಕ್ಷಿಸಬೇಕು ಮತ್ತು ನ್ಯಾಯಾಲಯದ ಆದೇಶಗಳನ್ನು ಸಹ ಪಾಲಿಸಬೇಕು. ಈ ಎರಡೂ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ನೀರಾವರಿ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ" ಎಂದು ಶಿವಕುಮಾರ್ ಹೇಳಿದರು.ಬೆಳೆಗಳನ್ನು ಸಹ ರಕ್ಷಿಸಬೇಕು. ಅದು ಕಾವೇರಿಯಾಗಿರಲಿ ಅಥವಾ ತುಂಗಭದ್ರಾ ಆಗಿರಲಿ, ರೈತರು ಮತ್ತು ಇತರ ಪಾಲುದಾರರೊಂದಿಗೆ ಸ್ಥಳೀಯ ಸಭೆಗಳನ್ನು ನಡೆಸಿ ಮತ್ತು ಅಣೆಕಟ್ಟುಗಳಲ್ಲಿನ ನೀರಿನ ಪರಿಸ್ಥಿತಿಯನ್ನು ಪರಿಗಣಿಸಿ ಬೆಳೆಗಳಿಗೆ ನೀರು ಬಿಡುಗಡೆ ಮಾಡುವ ಬಗ್ಗೆ ನಿರ್ಧರಿಸಲು ಅಧಿಕಾರಿಗಳನ್ನು ಕೇಳಿದ್ದೇನೆ" ಎಂದು ಹೇಳಿದರು.

ನೀರು ಬಿಡುಗಡೆ ಆದೇಶದ ನಂತರ ಸಂಭಾವ್ಯ ರೈತರ ಪ್ರತಿಭಟನೆಗಳ ನಡುವೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಕುರಿತು ಕೇಳಿದ ಪ್ರಶ್ನೆಗೆ, ಮುಖ್ಯಮಂತ್ರಿ ಎಲ್ಲರಿಗೂ ತಾಳ್ಮೆಯಿಂದಿರಲು ಕರೆ ನೀಡಿದರು, ರಾಜ್ಯದ ಹಿತಾಸಕ್ತಿಯನ್ನು ರಕ್ಷಿಸಲು ಸರ್ಕಾರ ಇದೆ ಎಂದು ಹೇಳಿದರು.

"ನಾನು ತುಂಬಾ ಪಾರದರ್ಶಕ. ರಾಜಕೀಯ ಅಥವಾ ಪ್ರಚಾರಕ್ಕಾಗಿ ಯಾರೂ ಇಂತಹ ಚಟುವಟಿಕೆಗಳಲ್ಲಿ ತೊಡಗಬಾರದು. ಯಾರೂ ನೀರನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ತಾಳ್ಮೆಯಿಂದಿರಿ; ನಾವು ನಿಮಗಾಗಿ ಇಲ್ಲಿದ್ದೇವೆ. ರೈತರನ್ನು ರಕ್ಷಿಸುವ ಶಕ್ತಿಯನ್ನು ಜನರು ನಮಗೆ ನೀಡಿದ್ದಾರೆ. ಯಾವುದೇ ಕಾರಣಕ್ಕೂ ರೈತರಿಗೆ ಸಮಸ್ಯೆಗಳನ್ನು ಉಂಟುಮಾಡಲು ನಾವು ಬಯಸುವುದಿಲ್ಲ. ತಾಳ್ಮೆಯಿಂದಿರಿ. ಎಲ್ಲಾ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಪರಿಹರಿಸಲಾಗುವುದು; ಪ್ರಕೃತಿ ನಮ್ಮನ್ನು ಉಳಿಸುತ್ತದೆ' ಎಂದು ಅವರು ಹೇಳಿದರು.

ಈ ಮೊದಲು ಜುಲೈ 28 ರಂದು, ಕರ್ನಾಟಕ ತಮಿಳುನಾಡಿಗೆ 15 ದಿನಗಳವರೆಗೆ 3,500 ಕ್ಯೂಸೆಕ್ ಕಾವೇರಿ ನೀರನ್ನು ಬಿಡುಗಡೆ ಮಾಡುವಂತೆ ಆದೇಶಿಸಿತ್ತು. ನಂತರ ಈ ಆದೇಶವನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಎತ್ತಿಹಿಡಿಯಿತು.

## ಸಿದ್ಧಗಂಗಾ ಮಠಕ್ಕೆ ನೂತನ ಸಚಿವ ಎಚ್.ಸಿ.ಬಾಲಕೃಷ್ಣ ಭೇಟಿ, ಶ್ರೀಗಳ ಆಶೀರ್ವಾದ

ತುಮಕೂರು,– ನೂತನವಾಗಿ ಸಚಿವರಾದ ಎಚ್.ಸಿ.ಬಾಲಕೃಷ್ಣ ಅವರು ಇತ್ತಿಚೀಗೆ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿ, ಕರ್ನಾಟಕ ರತ್ನ, ತ್ರಿವಿಧ ದಾಸೋಹಿ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದರು. ಪೂಜೆ ಸಲ್ಲಿಸಿದ ಬಳಿಕ ಶ್ರೀ ಶಿವಕುಮಾರ ಸ್ವಾಮೀಜಿಯವರ ದಿವ್ಯ ಜೀವನವನ್ನು ಸರಿಸಿದ ಅವರು, ಶ್ರೀಗಳ ಸಾಮಾಜಿಕ ಹಾಗೂ ಶೈಕ್ಷಣಿಕ ಸೇವೆಯನ್ನು ನೆನಪಿಸಿಕೊಂಡು ಭಕ್ತಿಪೂರ್ವಕ ನಮನ ಸಲ್ಲಿಸಿದರು. ಬಳಿಕ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಸ್ವಾಮೀಜಿಯವರನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಂಡರು. ಈ ಸಂದರ್ಭದಲ್ಲಿ ಶ್ರೀಗಳಿಂದ



ಮಠದ ಸೇವಾ ಪರಂಪರೆ, ದಾಸೋಹದ ಮಹತ್ವ ಹಾಗೂ ಸಮಾಜಮುಖಿ ಕಾರ್ಯಗಳ ಕುರಿತು ಮಾರ್ಗದರ್ಶನ ಪಡೆದರು. ಸಿದ್ಧಗಂಗಾ ಮಠವು ಶಿಕ್ಷಣ, ಅನ್ನದಾಸೋಹ ಹಾಗೂ ಸಮಾಜ ಸೇವೆಯ ಮೂಲಕ ರಾಜ್ಯದಾದ್ಯಂತ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಮಠದ ಸೇವಾ ಪರಂಪರೆ ಮತ್ತು ದಾಸೋಹಗಳು ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿವೆ ಎಂದು ಬಾಲಕೃಷ್ಣ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀಮಠದ ಸೇವಾ ಪರಂಪರೆ, ದಾಸೋಹದ ಚಿಂತನೆ ಹಾಗೂ ಸಮಾಜಮುಖಿ ಕಾರ್ಯಗಳು ಸದಾ ತಮುಂತಹ ಸಾರ್ವಜನಿಕ ಪ್ರತಿನಿಧಿಗಳಿಗೆ ಪ್ರೇರಣೆಯ ದಾರಿದೀಪವಾಗಿವೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೇವೆಯ ಸೌಲಭ್ಯ ತಲುಪಿಸುವ ನಿಟ್ಟಿನಲ್ಲಿ ಶ್ರೀಮಠದ ಆದರ್ಶಗಳು ಮಾರ್ಗದರ್ಶಕವಾಗಿವೆ ಎಂದು ಅವರು ತಿಳಿಸಿದರು. ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿದ ಸಚಿವರನ್ನು ಮಠದ ವತಿಯಿಂದ ಆತೀಯವಾಗಿ ಸ್ವಾಗತಿಸಲಾಯಿತು.

## ‘ನಾಳೆ ಬಂದ್ ಇಲ್ಲ: ಹೋರಾಟ ಮುಂದುವರೆಯುತ್ತದೆ’

### ಕನ್ನಡಪರ ಸಂಘಟನೆಗಳಿಂದ ಪ್ರತಿಭಟನೆ, ಸರ್ಕಾರಕ್ಕೆ ಹಕ್ಕೊತ್ತಾಯ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನಾಡು, ನುಡಿ, ಗಡಿ ನೀರಾವರಿ ಸಮಸ್ಯೆಗಳ ನಿವಾರಣೆಗೆ ಒತ್ತಾಯಿಸಿ ಕರೆ ನೀಡಿದ್ದ ಈ ತಿಂಗಳ 13ರ ಕರ್ನಾಟಕ ಬಂದ್‌ಅನ್ನು ಹಿಂಪಡೆಯಲಾಗಿದೆ. ಆದರೆ, ಬೇಡಿಕೆಗಳಿಗೆ ಒತ್ತಾಯಿಸಿ ಅಂದು ತುಮಕೂರಿನಲ್ಲಿ ಹೋರಾಟ ಮುಂದುವರೆಯುತ್ತದೆ ಎಂದು ಕನ್ನಡಪರ ಸಂಘಟನೆಗಳ ಒಕ್ಕೂಟ ತಿಳಿಸಿದೆ.ಬಂದ್ ಹಿನ್ನೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ಮಂಗಳವಾರ ನಗರದ ಕನ್ನಡ ಭವನದಲ್ಲಿ ಸಭೆ ಸೇರಿ 13ರ ಹೋರಾಟದ ರೂಪು ರೇಷೆಗಳ ಬಗ್ಗೆ ಚರ್ಚೆ ನಡೆಸಿದರು.

ಕನ್ನಡ ಸೇನೆ ಜಿಲ್ಲಾಧ್ಯಕ್ಷ ಡಾ.ಧನಿಯಾ ಕುಮಾರ್ ಮಾತನಾಡಿ, ಇತ್ತೀಚೆಗೆ ರಾಜ್ಯದಲ್ಲಿ ಮಳೆ ಬೀಳುತ್ತಿದೆ, ಜಲಾಶಯಗಳಲ್ಲಿ ನೀರಿನ ಪ್ರಮಾಣ ಹೆಚ್ಚುತ್ತಿದೆ. ತಮಿಳುನಾಡಿಗೆ ಹೋಗಬೇಕಾದ ನೀರು ಹರಿದು ಹೋಗಿದೆ. ಪರಿಸ್ಥಿತಿ ಬದಲಾಗಿದೆ. ಬಂದ್‌ಆಚರಣೆಯಿಂದ ಸಾರ್ವಜನಿಕರಿಗೆ, ವ್ಯಾಪಾರ–ವಹಿವಾಟಿಗೆ ತೊಂದರೆ ಆಗಬಾರದು ಎನ್ನುವ ಕಾರಣಕ್ಕೆ ಬಂದ್ ಆಚರಣೆಯನ್ನು ಹಿಂಪಡೆಯಲಾಗಿದೆ. ಆದರೆ ಮೂಲ ಬೇಡಿಕೆಗಳ ಹೋರಾಟ ಮುಂದುವರೆಯುತ್ತದೆ ಎಂದು ಹೇಳಿದರು.13ರಂದು ಬೆಳಿಗ್ಗೆ 10.30ಕ್ಕೆ ವಿವಿಧ ಸಂಘಟನೆಗಳ ಮುಖಂಡರು ಜಿಲ್ಲಾಧಿಕಾರಿಗಳ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಒತ್ತಾಯಿಸಿರುವ



ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಗುವುದು ಎಂದರು.

ಮೇಕೆದಾಟು ಯೋಜನೆ ಅನುಷ್ಠಾನ ಆಗಬೇಕು, ಕನ್ನಡ ರಾಜ್ಯೋತ್ಸವದಂದು ಕಪ್ಪುಬಾವುಟ ಪ್ರದರ್ಶಿಸಿ ಕನ್ನಡಿಗರಿಗೆ ಅವಮಾನ ಮಾಡುವ ಬೆಳಗಾವಿಯ ಎಂಇಎಸ್ ಸಂಘಟನೆಯನ್ನು ನಿಷೇಧಿಸಬೇಕು. ಸರ್ಕಾರದ ಆದೇಶದಂತೆ ಕೈಗಾರಿಕೆಗಳಲ್ಲಿ ಶೇಕಡ 80ರಷ್ಟು ಕನ್ನಡಿಗರಿಗೆ ಉದ್ಯೋಗ ನೀಡಬೇಕು. ನಾಮಫಲಕಗಳಲ್ಲಿ ಶೇಡಕ 60ರಷ್ಟು ಕನ್ನಡ ಅಕ್ಷರಗಳ ಪಾಲನೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಕನ್ನಡ ಮಾಧ್ಯಮ ಶಾಲೆಗಳಿಗೆ ಹೆಚ್ಚು ಅನುದಾನ ನೀಡಬೇಕು, ಕನ್ನಡ ಶಾಲೆ ಮುಚ್ಚಕೂಡದು. ಬಿಡದಿ ಟೌನ್‌ಶಿಪ್ ರದ್ದು ಮಾಡಬೇಕು, ಅಲ್ಲಿನ ರೈತರ ಮೇಲಿನ ಕೇಸುಗಳನ್ನು ವಾಪಸ್ ಪಡೆಯಬೇಕು ಎಂದು ಡಾ.ಧನಿಯಾ ಕುಮಾರ್ ಸರ್ಕಾರವನ್ನು ಒತ್ತಾಯಿಸಿದರು.

ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಪಿ.ಎನ್. ರಾಮಯ್ಯ ಮಾತನಾಡಿ, ತಮಿಳುನಾಡಿಗೆ ನೀರು ಹರಿಸುವ ಕಾವೇರಿ ತೀರ್ಪು ತಿರಸ್ಕರಿಸಬೇಕು. ಕನ್ನಡ ಶಾಲೆಗಳನ್ನು ಅಭಿವೃದ್ಧಿಗೊಳಿಸಬೇಕು. ಸರ್ಕಾರಿ ನೌಕರರು, ರಾಜಕೀಯ ಮುಖಂಡರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ಮಾದರಿಯಾಗಬೇಕು ಎಂದು ಹೇಳಿದರು.

ರೈತ ಸಂಘದ ಮುಖಂಡ ಬಸವರಾಜು ಮಾತನಾಡಿ, ಕನ್ನಡಿಗರ ಉದ್ಯೋಗಕ್ಕೆ ಮನ್ನಣೆ ನೀಡಲು ಸರ್ಕಾರ ಬದ್ಧವಾಗಿರಬೇಕು. ಕನ್ನಡ ಮಾಧ್ಯಮ ಶಾಲೆಗಳನ್ನು ಕಡೆಗಣಿಸದೆ ಆದ್ಯತೆ ಮೇಲೆ ಅಭಿವೃದ್ಧಿ ಮಾಡಿ ಪೋಷಕ ಸ್ನೇಹಿಗೊಳಿಸಬೇಕು. ನೆನೆಗುದಿಗೆ ಬಿದ್ದರುವ ರಾಜ್ಯದ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಸಂಸ್ಕೃತಿ ರಕ್ಷಣಾ ವೇದಿಕೆ ಅಧ್ಯಕ್ಷ ಹೊಸಕೋಟೆ ನಟರಾಜ್, ಕನ್ನಡ ಸೇನೆ ಗೌರವಾಧ್ಯಕ್ಷ ಆರ್.ಎ.ವೆಂಕಟಾಚಲ, ನಗರ ಅಧ್ಯಕ್ಷ ಜೆ.ವಿಠಲ್, ವಿವಿಧ ಸಂಘಟನೆಗಳ ಮುಖಂಡರಾದ ಶಬ್ಬೀರ್ ಅಹ್ಮದ್, ಮೀಸೆ ಸತೀಶ್, ನಟರಾಜ ಶೆಟ್ಟಿ, ದಿಬ್ಬೂರು ಗಿರೀಶ್, ಉಮೇಶ್ ಕುಮಾರ್, ಪ್ರಸನ್ನ ಕುಮಾರ್, ರಫಿ ಅಹ್ಮದ್, ಬೆಸ್ಟೆಕ್ ರಾಮರಾಜ್, ಇಮ್ರಾನ್ ಮೊದಲಾದವರು ಸಭೆಯಲ್ಲಿ ಭಾಗವಹಿಸಿದ್ದರು.

# ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆಗೆ ಸರ್ಕಾರ 1,000 ಕೋಟಿ ರೂ. ಅನುದಾನ ನೀಡಿದೆ

ಸೂರ್ಯಪ್ರಗತಿನ್ಯೂಸ್.ಕಾಂ

ಎಲ್ಲ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದುಕೊಂಡು ಕೆಲಸ ಮಾಡಬೇಕು. ಈ ಬಗ್ಗೆ ಪರಿಶೀಲಿಸಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಸಿಇಒ ಅವರು ಸರ್ಕಾರಕ್ಕೆ ವರದಿ ನೀಡಬೇಕು ಎಂದರು.

ಭಾರತ್ ಜೋಡೋ ಸಂಘ ಕಾರ್ಯಕ್ರಮ ಸಿಎಂ ಡಿ.ಕೆ.ಶಿವಕುಮಾರ್ ಅವರ ಕನಸಿನ ಕೂಸಿನ ಯೋಜನೆ. ಧರ್ಮ, ಜಾತಿ ಆಧಾರದ ಮೇಲೆ ವಿಂಗಡಣೆಯಾಗುತ್ತಿರುವ ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಪ್ರತಿಯೊಂದು ಪಂಚಾಯಿತಿಯಲ್ಲಿ ನಾಲ್ಕು ಸಾವಿರ ಜನಸಂಖ್ಯೆ ಇರುವ ಕಡೆ ಒಂದು ಸಂಘ ರಚಿಸಬೇಕು. ಸಂಘದಲ್ಲಿ ಎಲ್ಲ ವರ್ಗದ ಜನರು ಪಾಲ್ಗೊಳ್ಳಬೇಕು. ಸಮಾಜದ ಶೋಷಿತ, ಹಿಂದುಳಿದ ವರ್ಗಗಳನ್ನು ಸಂಘದಿಂದ ಕೈಬಿಡಬಾರದು ಎಂಬ ನಿಟ್ಟಿನಲ್ಲಿ ಸಂಘದ ಸದಸ್ಯತ್ವಕ್ಕೆ ಮೀಸಲಾತಿ ಕಲ್ಪಿಸಲಾಗಿದೆ. ಪಂಚಾಯಿತಿ ಅಧಿಕಾರಿಗಳು ಭಾರತ್ ಜೋಡೋ ಸಂಘಗಳ ಕಾರ್ಯಚಟುವಟಿಕೆಗಳ ಮೇಲೆ ನಿಗಾವಹಿಸಬೇಕು. ರಾಷ್ಟ್ರೀಯ ಹಬ್ಬಗಳನ್ನು ಬಹಳ ವಿಜೃಂಭಣೆಯಿಂದ ಆಚರಿಸಬೇಕು. ಯಾವುದೇ ರೀತಿಯ ವ್ಯತ್ಯಾಸಗಳು ಆಗದಂತೆ ನೋಡಲ್ ಅಧಿಕಾರಿಗಳು ನೋಡಬೇಕು ಎಂದರು. ಸಂಘದ ಕಾರ್ಯಚಟುವಟಿಕೆ ನಡೆಸಲು ಶಾಲಾ–ಕಾಲೇಜು, ಪಂಚಾಯಿತಿಗೆ ಸಂಬಂಧಿಸಿದ ಕಟ್ಟಡಗಳನ್ನು ಬಳಸಿಕೊಳ್ಳಬೇಕು. ಇದು ಸರ್ಕಾರಕ್ಕೆ ಫ್ಲ್ಯಾಗ್‌ಶಿಪ್ ಕಾರ್ಯಕ್ರಮ. ಈ ಯೋಜನೆಗೆ 1000 ಕೋಟಿ ರೂ. ಖರ್ಚು



ಮಾಡುತ್ತಿದ್ದೇವೆ ಎಂದರೆ ಸಾಮಾನ್ಯ ಕಾರ್ಯಕ್ರಮವಲ್ಲ. ಸಮಾಜದ ನ್ಯೂನತೆಗಳನ್ನು ಸರಿಪಡಿಸಲು ಯುವಕರಿಗೆ ಅವಕಾಶ ಸಿಗುತ್ತದೆ. 10 ಸಾವಿರ ಸಂಘಗಳನ್ನು ಮಾಡುವ ಕೆಲಸ ಯಾವ ರಾಜ್ಯಗಳು ಮಾಡಿಲ್ಲ. ಆಗಸ್ಟ್ ತಿಂಗಳ ಕೊನೆ ವೇಳೆ ಸಂಘದ ನೋಂದಣಿಯನ್ನು ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ. ನೋಂದಣಿ ಪೂರ್ಣಗೊಳಿಸಿದ ಬಳಿಕ ಸಿಎಂ ಅವರು ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು.

**ಗುಬ್ಬಿ ತಾಲ್ಲೂಕಿಗೆ ಭೇಟಿ :** ಇದಕ್ಕೂ ಮುನ್ನ ಗುಬ್ಬಿ ತಾಲೂಕು ಸಿ.ಎಸ್.ಪುರ ಹೋಬಳಿ ಯಡುವನಹಳ್ಳಿಗೆ ಭೇಟಿ ನೀಡಿದ ಪರಮೇಶ್ವರ, ತುರ್ತು ಕ್ರಿಯಾ ಯೋಜನೆ(ಅಂಕ) ಅನುದಾನದಡಿ ಕೊರೆಸಲಾದ ಕುಡಿಯುವ ನೀರಿನ ಕೊಳವೆಬಾವಿಯನ್ನು ಪರಿಶೀಲಿಸಿದರು.

ಸಿಎಪಿ ಅನುದಾನದಡಿ ಕೊರೆದಿರುವ ಕುಡಿಯುವ ನೀರಿನ ಕೊಳವೆಬಾವಿಯನ್ನು ವೀಕ್ಷಿಸಿ, ಬೋರ್‌ವೆಲ್‌ನ ನೀರಿನ ಲಭ್ಯತೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಗ್ರಾಮಸ್ಥರಿಗೆ ಕುಡಿಯುವ ನೀರು ಪೂರೈಸಲು ಕೈಗೊಂಡಿರುವ ವ್ಯವಸ್ಥೆಯ ಬಗ್ಗೆ ಪರಿಶೀಲನೆ ನಡೆಸಿದರು.ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಜನರಿಗೆ ಅಗತ್ಯ ಪ್ರಮಾಣದಲ್ಲಿ ಕುಡಿಯುವ ನೀರು ಲಭ್ಯವಾಗುವಂತೆ ಅಧಿಕಾರಿಗಳು ನಿರಂತರವಾಗಿ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡುವಂತೆ ಅವರು ಸೂಚಿಸಿದರು. ಈ ವೇಳೆ ಗ್ರಾಮಸ್ಥರು, ಕಸ ವಿಲೇವಾರಿ, ಆಸ್ಪತ್ರೆ ಸಮಸ್ಯೆ ಕುರಿತು ಹಾಗೂ ಸ್ಮಶಾನ ಭೂಮಿ ಮಂಜೂರು ಮಾಡುವಂತೆ ಕೋರಿ ಡಿಸಿಎಂ ಅವರಿಗೆ ಮನವಿ ಸಲ್ಲಿಸಿದರು. ಶೀಘ್ರವಾಗಿ ಪರಿಶೀಲಿಸಿ ಪರಿಹಾರ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರಿಗೆ ಸೂಚಿಸಿದರು.

**ಕುಣಿಗಲ್ ಬರ ಪೀಡಿತ ಪ್ರದೇಶಕ್ಕೆ ಡಿಸಿಎಂ ಜಿ.ಪರಮೇಶ್ವರ**

ಕುಣಿಗಲ್ ತಾಲೂಕಿನ ನಾಗನಹಳ್ಳಿ, ಮಂಡನಪಾಳ್ಯ ಗ್ರಾಮದ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಬರ ಪರಿಸ್ಥಿತಿಯನ್ನು ಪರಿಶೀಲಿಸಿದರು. ನಂತರ ಅಡಿಕೆ ತೋಟಗಳಿಗೆ ಭೇಟಿ ನೀಡಿದ ಅವರು, ಫಲವತ್ತಾದ ಮಣ್ಣಿನಲ್ಲಿ ಬೆಳೆದಿದ್ದ ಅಡಿಕೆ ಬೆಳೆ, ನೀರಿನ ಕೊರತೆಯಿಂದ ಒಣಗುತ್ತಿರುವುದನ್ನು ಖುದ್ದು ವೀಕ್ಷಿಸಿದರು. ಬರದಿಂದ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ರೈತರು ಬರ ಪರಿಹಾರ ಒದಗಿಸುವಂತೆ ಹಾಗೂ ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಮೂಲಕ ಕುಣಿಗಲ್ ತಾಲೂಕಿಗೆ ನೀರು ಹರಿಸುವಂತೆ ಉಪಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆಗೆ ಸರ್ಕಾರ ಈಗಾಗಲೇ 1,000 ಕೋಟಿ ರೂ. ಅನುದಾನ ಮೀಸಲಿಟ್ಟು ಕಾಮಗಾರಿಗೆ ಅನುಮೋದನೆ ನೀಡಿದೆ. ಈ ಪೈಕಿ 450 ಕೋಟಿ ರೂ. ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರಲ್ಲದೆ, ತುರುವೇಕೆರೆ ಹಾಗೂ ಚಿಕ್ಕನಾಯಕನಹಳ್ಳಿ ಭಾಗದ ರೈತರು ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಸಮಸ್ಯೆ ಉಂಟಾಗಿದೆ. ಈ ವಿಚಾರವನ್ನು ಮಾತುಕತೆಯ ಮೂಲಕ ಬಗೆಹರಿಸಲಾಗುವುದು ಎಂದು ಡಾ. ಜಿ.ಪರಮೇಶ್ವರ ಅವರು ರೈತರಿಗೆ ಭರವಸೆ ನೀಡಿದರು.

ಕುಣಿಗಲ್ ತಾಲೂಕಿನ ಹಾಲುಗೋನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮದಲ್ಲಿನ ಕುಡಿಯುವ ನೀರಿನ ಮೂಲವಾಗಿರುವ ಕೊಳವೆ ಬಾವಿಯನ್ನು ಪರಿಶೀಲಿಸಿದರು. ನೀರಿನ ಲಭ್ಯತೆ, ನೀರಿನ ಮಟ್ಟ ಹಾಗೂ ಗ್ರಾಮಸ್ಥರಿಗೆ ನೀರು ಪೂರೈಕೆ ಮಾಡುತ್ತಿರುವ ವ್ಯವಸ್ಥೆಯ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ನಂತರ ತುರುವೇಕೆರೆ ತಾಲೂಕಿನ ಮಾಯಸಂದ್ರದಲ್ಲಿ ರೈತರಿಗೆ ಮೇವಿನ ಬೀಜದ ಕಿಟ್‌ಗಳನ್ನು ವಿತರಿಸಿ, ರೈತರಿಂದ ಅಹವಾಲುಗಳನ್ನು ಸ್ವೀಕರಿಸಿ ಸಮಸ್ಯೆಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಎಂ.ಟಿ.ಕೃಷ್ಣಪ್ಪ, ಡಾ: ಹೆಚ್.ಡಿ. ರಂಗನಾಥ್, ಸಿ.ಬಿ. ಸುರೇಶ್ ಬಾಬು, ಕೆ.ಷಡಾಕ್ಷರಿ, ಬಿಎಂಟಿಸಿ ಉಪಾಧ್ಯಕ್ಷ ನಿಕೇತ್ ರಾಜ್ ಎಂ. ಸೇರಿದಂತೆ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

## ಸರ್ಕಾರದಲ್ಲಿ ಹಣ ಇಲ್ಲವೆಂದು ಘೋಷಣೆ ಮಾಡಿ



ಕುಡಿಯುವ ನೀರಿನ ವ್ಯವಸ್ಥೆ ಸರ್ಕಾರ ಕಲ್ಪಿಸಬೇಕು ಆದರೆ ಈ ವಿಚಾರದಲ್ಲಿ ಸರ್ಕಾರದ ಸಂಪೂರ್ಣ ವಿಫಲವಾಗಿದೆ ಎಂದು ಹೇಳಿದರು.

ಹೇಮಾವತಿ ನೀರು ಹರಿಸುವ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು ಈ ಬಗ್ಗೆ ಸಚಿವ ಕೃಷ್ಣ ಬೈರೇಗೌಡರವರ ಬಳಿ ಮಾತಾನಾಡಿದ್ದೇನೆ,ಈಗಾಗಲೇ ಐಸಿಸಿ ಸಭೆ ಮಾಡಬೇಕಿತ್ತು ಆದರೆ ಸಭೆ ನಡೆಸಿಲ್ಲ, ನಮ್ಮ ಭಾಗಕ್ಕೆ ನೀರು ಹರಿಸಲು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಹೇಳಿದರು.ಸರ್ಕಾರದಲ್ಲಿ ಹಣ ಇಲ್ಲ ಅಂದರೆ ಕೂಡಲೇ ಇಲ್ಲವೆಂದು ಘೋಷಣೆ. ಮಾಡಿ,ಇಲ್ಲಾಂದ್ರೆ ಶ್ವೇತ ಪತ್ರ ಹೊರಡಿಸಿ ಎಂದು ಒತ್ತಾಯಿಸಿದರು. ಕಾಂಗ್ರೆಸ್ ಸಿದ್ದರಾಮಯ್ಯ ಅವರನ್ನ ಬಳಸಿಕೊಂಡು ಬಿಟ್ಟು ಬಿಟ್ಟಿದೆ, ಮಂತ್ರಿ ಮಂಡಲ ಆದಾಗ ಅಸಮಾಧಾನ ಇರುವ ಬಗ್ಗೆ ಗೊತ್ತಾಗುತ್ತಿದೆ,ಪ್ರಮಾಣ ವಚನಕ್ಕೆ ಬಾರದೆ ಇದ್ದದ್ದು ಗೋಚರಿಸಿದೆ ಇದು ಕಾಂಗ್ರೆಸ್ ನ ಸಹಜ ಗುಣ ಎಂದು ತಿಳಿಸಿದರು..ಬಿಡದಿ ಹೋರಾಟಕ್ಕೆ ಬಿಜೆಪಿ ಅಸಹಕಾರ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದರು,

ಬಿಡದಿ ಹೋರಾಟಕ್ಕೆ ಬಿಜೆಪಿ ಸಹಕಾರ ನೀಡಿದೆ,ವಿಪಕ್ಷ ನಾಯಕರಾದ ಆರ್ ಅಶೋಕ್ ರವರು ಬಂದು ಮೊನ್ನೆ ಚಾಲನೆ ನೀಡಿದ್ದರು,ಅವರ ಸಹಕಾರ ಇದೆ. ಬಿಡಿದಿಯಲ್ಲಿ ರೈತರು ಜಮೀನನ್ನ ನಂಬಿ ಜೀವನ ಸಾಗಿಸುತ್ತಿದ್ದಾರೆ,ಆದರೆ ಸರ್ಕಾರ ಯಾರಿಗೋಸ್ಕರ ಹೀಗೆ ಮಾಡ್ತಿದ್ದಾರೆ. ಯಾರಿಗೋ ಒಪ್ಪಂದ ಮಾಡಿಕೊಂಡು ಬಂದಿದ್ದಾರೋ ಗೊತ್ತಿಲ್ಲ ಹೀಗಾಗಿ ರೈತರನ್ನ ಒಕ್ಕಲೇಬ್ಬಿಸುವ ಕೆಲಸ ಸರ್ಕಾರ ಮಾಡ್ತಿದೆ.. ಬರಡು ಭೂಮಿ ಇರುವ ಕಡೆ ಯೋಜನೆ ಮಾಡಿಕೊಳ್ಳಲಿ ಆದರೆ ಬಿಡದಿಯಲ್ಲಿ ಬೇಡ ಹೀಗಾಗಿ ದೇವೇಗೌಡರು ಕುಮಾರಸ್ವಾಮಿ ಅವರು ಈ ಬಗ್ಗೆ ಹೇಳಿದ್ದಾರೆ ಆದರೆ ಸಿಎಂಗೆ ಇದರಲ್ಲಿ ವಿಶೇಷ ಇಂಟರ್ ರೆಸ್ಟ್ ಇದೆ ಅಂತಾ ಕಾಣುತ್ತದೆ ಎಂದರು.

## "ಗುಬ್ಬಿಯಲ್ಲಿ ಎಸ್.ಆರ್. ಶ್ರೀನಿವಾಸ್ ಅವರಿಂದ ಡ್ರಾಮಾ ಕಂಪನಿ

"ಇತರರ ಮೂಲಕ ಹೇಳಿಕೆ ಕೊಡಿಸುವುದನ್ನು ಬಿಟ್ಟು ನೇರವಾಗಿ ಮಾತನಾಡಿ "ಗುಬ್ಬಿಯಲ್ಲಿ ಎಸ್.ಆರ್. ಶ್ರೀನಿವಾಸ್ ಅವರ ನೇತೃತ್ವದಲ್ಲಿ ಡ್ರಾಮಾ ಕಂಪನಿಯೊಂದನ್ನು ತೆರೆದಿದ್ದು, ಅದರಲ್ಲಿ ಕಾಮಿಡಿ ಮಾಡುವ ನಟನೊಬ್ಬನನ್ನು ಗುಳ್ಳೆನರಿ ಪಾತ್ರಕ್ಕೆ ಇಟ್ಟು ಕೊಂಡಿದ್ದಾರೆ ಎಂದು ದಿಲೀಪ್ ಕುಮಾರ್ ವ್ಯಂಗ್ಯವಾಡಿದರು."ಮಾಧ್ಯಮದ ಮುಂದೆ ಬಂದು ಏನೇನೋ ಹೇಳಿಕೆ ನೀಡುವವರ ಮೂಲಕ ರಾಜಕೀಯ ಮಾಡಿಸುವುದನ್ನು ಬಿಟ್ಟು, ನಿಜವಾಗಿಯೂ ತಾಕತ್ತಿದ್ದರೆ ಡಿ.ಕೆ. ಶಿವಕುಮಾರ್ ಅವರ ಮುಂದೆ ನಿಮ್ಮ ವಿರೋಧವನ್ನು ನೇರವಾಗಿ ವ್ಯಕ್ತಪಡಿಸಿ," ಎಂದು ಅವರು ಹೇಳಿದರು.

ಮುಂದಿನ ದಿನಗಳಲ್ಲಿ ರೈತ ಹೋರಾಟಗಾರರ ಕುರಿತು ಹೇಳಿಕೆ ನೀಡುವಾಗ ಎಚ್ಚರಿಕೆಯಿಂದ ಮಾತನಾಡಬೇಕು. ರೈತರ ಹೋರಾಟವನ್ನು ಅವಹೇಳನ ಮಾಡುವ ರೀತಿಯಲ್ಲಿ ಹೇಳಿಕೆ ನೀಡಬಾರದು ಎಂದು ದಿಲೀಪ್ ಕುಮಾರ್ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಶಂಕರ್ ಕುಮಾರ್, ಸಿದ್ದರಾಮಯ್ಯ ಲಕ್ಷ್ಮೀ ರಂಗಯ್ಯ, ವಿದ್ಯಾಸಾಗರ್, ಶ್ರೀಧರ್, ಮಂಜುನಾಥ್, ಲೋಕೇಶ್ ಹಾಗೂ ತಿರುಮಲೇಶ್ ಉಪಸ್ಥಿತರಿದ್ದರು.

# ಕಲೆ, ಸಾಹಿತ್ಯ ಬಿಂಬಿಸುವಲ್ಲಿ ಕಥಾ ಕೀರ್ತನ ಕ್ಷೇತ್ರ ಸಶಕ್ತ ಮಾಧ್ಯಮ ಹರಿಕಥಾ ವಿದ್ವಾನ್ ಡಾ. ಲಕ್ಷ್ಮಣದಾಸ್

ತುಮಕೂರು– ಕರ್ನಾಟಕದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಯು ಶಾಶ್ವತವಾಗಿ ನೆಲೆಯೂರಿದೆ ಎಂಬುದನ್ನು ನಿರೂಪಿಸುವಲ್ಲಿ ಕಥಾಕೀರ್ತನ ಕ್ಷೇತ್ರ ಒಂದು ಸಶಕ್ತ ಮಾಧ್ಯಮವಾಗಿದೆ ಎಂದು ಹರಿಕಥಾ ವಿದ್ವಾನ್ ಡಾ. ಲಕ್ಷ್ಮಣದಾಸ್ ಹೇಳಿದರು. ಬೆಂಗಳೂರಿನ ವಿಜಯನಗರದ ಆದಿಚುಂಚನಗಿರಿ ಸುಕ್ಷೇತ್ರದಲ್ಲಿ ನಡೆದ ಅಖಿಲ ಕರ್ನಾಟಕ ಕೀರ್ತನ ಕಲಾ ಪರಿಷತ್ ಸಹಯೋಗದಲ್ಲಿ ಮೂರು ದಿನಗಳ ಕಾಲ ಏರ್ಪಡಿಸಿದ್ದ ಹರಿಕಥೆ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕಥಾಕೀರ್ತನ ಸಾರ್ವಭೌಮತ್ವ ರೂಪಿಸಿ ಆಧರಿಸಿ, ಜನಮಾನಸದಲ್ಲಿ ಉಳಿದಿರುವ ಕೀರ್ತನ ಸೌರ್ವಭಾಮರೆನಿಸಿದ ಆರ್. ಗುರುರಾಜುಲು ನಾಯ್ಡು, ಬದ್ರಗಿರಿ ಕೇಶವದಾಸ್, ಅಚ್ಯುತದಾಸ್ ಮತ್ತು ಸರ್ವೋತ್ತಮದಾಸ್ ಅಂತಹ ಅನೇಕ ಮಹಾನೀಯರು ಇಂದು ನಮ್ಮಗಳಿಗೆ ಸನ್ಮಾರ್ಗ ತೋರಿದ್ದಾರೆ ಎಂದರು.

ಈ ವೇದಿಕೆಯಲ್ಲಿ ಕೀರ್ತನೆಯನ್ನು ಪ್ರಸ್ತುತಪಡಿಸಿದಂತಹ ಯುವ ಕೀರ್ತನಕಾರರಲ್ಲಿ ಮತ್ತು ಅವರಿಗೆ ವಾದ್ಯ ಸಹಕಾರ ನೀಡಿ ಸಂಭ್ರಮಿಸಿದ ಕಲಾವಿದರಲ್ಲಿ ಕೀರ್ತನ ಅಸ್ತಿತ್ವ ಮುಖ್ಯ




ಎಂಬ ಅರಿವು ಇರಬೇಕು ಎಂದು ಹೇಳಿದರು.

ಸಂಸ್ಕೃತ ವಿದೂಷಿ ಬಿ.ವಿ. ಆರತಿ ಅವರು ರಾಮಾಯಣದ ಬಗ್ಗೆ ಉಪನ್ಯಾಸ, ಡಾ. ಪಾವಗಡ ಪ್ರಕಾಶ್ ಪ್ರತಿಪಾದಿಸಿದ ಭಾಗವತದಲ್ಲಿ ಕಥಾಕೀರ್ತನ, ಪ್ರಮುಖ ಅಂಶಗಳು, ಸಂಗೀತ ವಿದ್ವಾನ್‌ಆರ್ ಕೆ ಪದ್ಮನಾಭನ್, ದಾಸ ಸಾಹಿತ್ಯ ಕಥಾಕೀರ್ತನಕ್ಕೆ ಮತ್ತು ಕೀರ್ತನ ಪರಂಪರೆಗೆ ಕನಕದಾಸರು, ಪುರಂದರದಾಸರು ಮುಂತಾದ ಹರಿದಾಸರು ಸಮಾಜಕ್ಕೆ ನೀಡಿದ ಮೌಲ್ಯ ಸಾಂಸ್ಕೃತಿಕ ನೆಲೆಗಳು ಇವುಗಳನ್ನು ಸಂಗೀತವನ್ನು ಹಾಡುತ್ತಲೇ, ತಮ್ಮ ಭಾಷಣದುದ್ದಕ್ಕೂ ಕೀರ್ತನೆಕಾರರಿಗೆ ಬೇಕಾದ ಸಮಯ ಪ್ರಜ್ಞೆ ಸಾಹಿತ್ಯದ ಪ್ರತಿಪಾದನೆ ಮುಂತಾದವುಗಳನ್ನು ತಿಳಿಸಿದ ಕ್ಷಣಗಳನ್ನು ಮತ್ತೊಮ್ಮೆ ಕೀರ್ತನಾಕಾರರು ಕಲಾವಿದರ ತಾವೆಲ್ಲಾ ಮೂರು ದಿನಗಳಲ್ಲಿ ಕೀರ್ತನೆ ಮಾಡಿದ ಯುವಕೀರ್ತನಕಾರರೂ ಎಲ್ಲಾ ಮಹನೀಯರು ನೀಡಿರುವಂತಹ ಸಾಹಿತ್ಯ ಸಂಗೀತ ನಡೆಗಳನ್ನು ಬಳಸಿಕೊಂಡಿದ್ದೆ ಆದರೆ ಸಮಾಜಕ್ಕೆ ಉತ್ತಮ ಸಾಮಾಜಿಕ ಮೌಲ್ಯಗಳನ್ನು ನೀಡಬಹುದು ಎಂದು ತಿಳಿಸಿದರು.

ಅತಿಥಿಯಾಗಿ ಭಾಗವಹಿಸಿದ್ದ ಸುಧಾ ಮಂಜುನಾಥ್ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಕಥಾಕೀರ್ತನ ಎಂದರೆ ಯಾವ ಯಾವ ರಾಜ್ಯಗಳಲ್ಲಿ ಹೇಗೆ, ಯಾವ ಭಾಷೆಯಲ್ಲಿ ಕರೆಯುತ್ತಾರೆ ಎಂಬುದನ್ನು ವಿವರವಾಗಿ ತಿಳಿಸುತ್ತಾ, ಕಥಾಕೀರ್ತನ ಇಂದಿನ ದಿನ ಮಾನಸದಲ್ಲಿ ಒಂದು ಸಶಕ್ತ ಮಾಧ್ಯಮವಾಗಿ ಯುವ ಶಕ್ತಿಗೆ ಪರಿಚಯವಾಗಿಸುವಲ್ಲಿ ಸಂದೇಹವಿಲ್ಲ ಎಂದರು.ಮನಕುಲದ ಆಧ್ಯಾತ್ಮಿಕ ಮತ್ತು ಧಾರ್ಮಿಕತೆಯ ಜತೆಗೆ ಸಾಂಸ್ಕೃತಿಕ ಸೊಗಡನ್ನು ಅಭಿನಯ ರೂಪದಲ್ಲಿ ತಿಳಿಸುತ್ತದೆ ಎಂದು ಅವರು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಅಖಿಲ ಕರ್ನಾಟಕ ಕೀರ್ತನ ಕಲಾ ಪರಿಷತ್ತಿನ ಅಧ್ಯಕ್ಷರಾದ ಲೋಕೇಶ್‌ದಾಸ್ ಅವರು, ಕಥಾಕೀರ್ತನಕಾರ ಪ್ರಸ್ತುತ ಸಮಾಜದಲ್ಲಿ ಕೀರ್ತನೆ ಮಾಡುವಾಗ ಸಾಹಿತ್ಯ ಪ್ರಜ್ಞೆ ಮತ್ತು ಅಧ್ಯಯನ ಶೀಲತೆ ಬಳಸಿಕೊಂಡಾಗ ಕಥಾಕೀರ್ತನದ ಅಸ್ಮಿತೆ ಸಮಾಜಕ್ಕೆ ಪೂರಕವಾಗುತ್ತದೆ. ಇದಕ್ಕೆ ಸರ್ಕಾರದ ಪ್ರೋತ್ಸಾಹ ಸಹಕಾರ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರದ ಅಧೀನದಲ್ಲಿರುವ ಮುಜರಾಯಿ ಸೇವಾ ಸಂಸ್ಥೆಗಳಲ್ಲಿ ಮತ್ತು ದೇವಾಲಯಗಳಲ್ಲಿ ತಿಂಗಳಿಗೊಮ್ಮೆ ಆಯಾ ಜಿಲ್ಲಾ ಕೀರ್ತನಕಾರರಿಗೆ ಕೀರ್ತನೆ ಮಾಡಲು ಅವಕಾಶ ಕಲ್ಪಿಸಿದರೆ ಜೀವನೋಪಾಯಕ್ಕೆ ಅನುಕೂಲವಾಗುತ್ತದೆ. ಏಕೆಂದರೆ ಕೀರ್ತನಾಕಾರರು ಸರ್ಕಾರಿ ಸೇವೆಯಲ್ಲಿರುವುದು ವಿರಳ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಗೀತಾ, ನೃತ್ಯ ಅಕಾಡಮಿ ಸದಸ್ಯರಾದ ಕೀರ್ತನಕಾರ ದೇವರಾಜ್, ಬೆಂಗಳೂರಿನ ಅನಂತ ಆಶ್ರಮದ ಅಧ್ಯಕ್ಷರಾದ ಶಂಕರ್ ಮತ್ತಿತರರು ಉಪಸ್ಥಿತರಿದ್ದರು. ಶಿವಶಂಕರ ದಾಸ ಸ್ವಾಗತಿಸಿದರು. ಕಲಾಶ್ರೀ ನರಸಿಂಹದಾಸ್ ಕಾರ್ಯಕ್ರಮ ನಿರೂಪಿಸಿದರು. ರವಿಕುಮಾರ್‌ದಾಸ ವಂದಿಸಿದರು.

# ರಂಗ ಪರಂಪರೆ ಟ್ರಸ್ಟ್‌ನ ಗುಪ್ತ ಸಾಮ್ರಾಜ್ಞಿ 'ಧ್ರುವ ಸ್ವಾಮಿನಿ' ಐತಿಹಾಸಿಕ ನಾಟಕ ಪ್ರದರ್ಶನ

ಸೂರ್ಯಪ್ರಗತಿನ್ಯೂಸ್.ಕಾಂ

ಭಾರತದ ಪ್ರಾಚೀನ ಇತಿಹಾಸದಲ್ಲಿ ಗುಪ್ತರ ಸಾಮ್ರಾಜ್ಯ ಅತ್ಯಂತ ಪ್ರಸಿದ್ಧಿಯನ್ನು ಪಡೆದ ಸಾಮ್ರಾಜ್ಯವಾಗಿತ್ತು. ಕ್ರಿಸ್ತ. 280 ರಿಂದ 550ರವರೆಗೆ ಆಳಿ ಬಾಳಿದ ಗುಪ್ತ ಸಾಮ್ರಾಜ್ಯ ಇಡೀ ಭಾರತೀಯ ಉಪಖಂಡದ ಬಹುಭಾಗಗಳನ್ನೊಳಗೊಂಡಿತ್ತು. ಗುಪ್ತರ ನಾಯಕತ್ವದಡಿಯಲ್ಲಿ ಸೃಷ್ಟಿಯಾದ ಶಾಂತಿ ಮತ್ತು ಸಮೃದ್ಧಿಯಿಂದಾಗಿ ಅವರ ಆಡಳಿತದ ಅವಧಿಯನ್ನು ಭಾರತದ ಸುವರ್ಣ ಯುಗವೆಂದು ಕರೆಯಲಾಗುತ್ತದೆ. ವಿಜ್ಞಾನ, ತಂತ್ರಜ್ಞಾನ, ಕಲೆ, ಸಾಹಿತ್ಯ, ತರ್ಕಶಾಸ್ತ್ರ, ಗಣಿತ, ಖಗೋಳ ಶಾಸ್ತ್ರ, ಧರ್ಮ ಮತ್ತು ತತ್ವ ಶಾಸ್ತ್ರಗಳ ವ್ಯಾಪಕ ಅವಿಷ್ಕಾರಗಳು ಮತ್ತು ಪರಿಶೋಧನೆಯಿಂದ ಗುಪ್ತ ಸಾಮ್ರಾಜ್ಯ ಉನ್ನತ ಮಟ್ಟದಲ್ಲಿ ಗುರುತಿಸಲ್ಪಟಿತು. ಕಾಳಿದಾಸ, ಆರ್ಯಭಟ, ವರಾಹ ನಿಹಿರ, ವಿಷ್ಣುಶರ್ಮ ಮತ್ತು ವಾತ್ಸಾಯನರಂತಹ ಮಹಾನ್ ವಿದ್ವಾಂಸರನ್ನು ಹೊಂದಿದ್ದು ಗುಪ್ತ ಸಾಮ್ರಾಜ್ಯವು ಬಲವಾದ ವ್ಯಾಪಾರ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಏಷ್ಯಖಂಡದಲ್ಲಿ ತನ್ನ ಪ್ರಭಾವ ಬೀರಿತ್ತು.

ಗುಪ್ತ ಸಾಮ್ರಾಜ್ಯದಲ್ಲಿ ಸಮುದ್ರಗುಪ್ತನ ಮಗ ಎರಡನೇ ಚಂದ್ರಗುಪ್ತನು ಅತ್ಯಂತ ಬಲಾಢ್ಯನಾದ ಚಕ್ರವರ್ತಿಯಾಗಿದ್ದು, ಇವನಿಂದ ಸಾಮ್ರಾಜ್ಯ ಇನ್ನೂ ವಿಸ್ತಾರವಾಗಿ ಬೆಳೆಯಿತು. ಚೀನಾದ ವಿದ್ವಾಂಸ ಪಾಹಿಯನ್ ಎರಡನೇ ಚಂದ್ರಗುಪ್ತನ ಬಗ್ಗೆ ವಿಶೇಷವಾಗಿ ತನ್ನ ದಿನಚರಿ ಪುಸ್ತಕದಲ್ಲಿ ದಾಖಲಿಸಿದ್ದಾನೆ. ಇವನ ಆಸ್ಥಾನವು ನವರತ್ನರು ಅಂದರೆ ಸಾಹಿತ್ಯ ಕಲೆಗಳಲ್ಲಿ ಪರಿಣಿತರಾಗಿದ್ದ ಒಂಬತ್ತು ವಿದ್ವಾಂಸರಿಂದ ಪ್ರಸಿದ್ಧವಾಗಿತ್ತು. ಅಮರ ಕವಿ ಕಾಳಿದಾಸನು ಇವನ ಆಸ್ಥಾನದಲ್ಲಿದ್ದನು. ಇಂತಹ ಮಹಾನ್ ಸಾಮ್ರಾಟನಾದ ಎರಡನೇ ಚಂದ್ರಗುಪ್ತನು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಇವನ ಜೀವನದಲ್ಲಿ ನಡೆದ ಘಟನೆ




ಮತ್ತು ಇವನ ಪತ್ನಿ ಧ್ರುವಸ್ವಾಮಿನಿ ಎದುರಿಸಿದ ಕಷ್ಟ ಕೋಟಲೆಗಳು, ಅನುಭವಿಸಿದ ಸಂಕಟಗಳು ಅವುಗಳನ್ನೆಲ್ಲಾ ಮೆಟ್ಟಿನಿಂತು ಗುಪ್ತ ಸಾಮ್ರಾಜ್ಯವನ್ನು ರಕ್ಷಿಸಿದ ಘಟನೆಗಳ ಮೇಲೆ ಎಣೆದ ಐತಿಹಾಸಿಕ ನಾಟಕ ಧ್ರುವಸ್ವಾಮಿನಿ. ಜಯಶಂಕರ್‌ಪ್ರಸಾದ್‌ರವರು ಹಿಂದಿಯಲ್ಲಿ ರಚಿಸಿದ 'ಧ್ರುವಸ್ವಾಮಿನಿ' ಐತಿಹಾಸಿಕ ನಾಟಕವನ್ನು ಸೂರ್ಯಕಾಂತ.ಜಿರವರು ಕನ್ನಡಕ್ಕೆ ರೂಪಾಂತರಿಸಿದ್ದು, ಖ್ಯಾತ ರಂಗನಿರ್ದೇಶಕರಾದ ಗಣಪತಿಗೌಡರು ರಂಗರೂಪಕ್ಕೆ ತಂದಿದ್ದಾರೆ. ಮುದ್ದಯ್ಯನಪಾಳ್ಯದ ರಂಗ ಪರಂಪರೆ ಟ್ರಸ್ಟಿನ ಹೊಸ ಪ್ರಯೋಗ ಇದಾಗಿದ್ದು, ದಿನಾಂಕ: 09–08–2026ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಿಂದ ಬೆಂಗಳೂರಿನ ಮಂಗನಹಳ್ಳಿಯಲ್ಲಿರುವ ಬಾಲ್ಯ ಕಲಾವೇದಿಕೆಯಲ್ಲಿ, ಧನ್ವಂತ್ರಿ ಬಿ.ಎರವರ ನಿರ್ದೇಶನದಲ್ಲಿ ನಾಲ್ಕನೇ ಪ್ರದರ್ಶನವನ್ನು ನಡೆಸಲಾಯಿತು.

ಗುಪ್ತ ರಾಜರಲ್ಲಿ 100 ಯುದ್ಧಗಳ ಸರದಾರ ಎಂದು ಪ್ರಸಿದ್ಧಿ ಪಡೆದ ಸಮುದ್ರ ಗುಪ್ತನ ಸಾಮ್ರಾಜ್ಯ ಹಿಮಾಲಯದಿಂದ ನರ್ಮದ ನದಿಯವರೆಗೆ ಮತ್ತು ಬ್ರಹ್ಮಪುತ್ರದಿಂದ ಯಮುನೆಯವರೆಗೆ ವಿಸ್ತರಿಸಿತ್ತು. ಅನಂತರ ಸಮುದ್ರ ಗುಪ್ತರ ಜ್ಯೇಷ್ಠ ಪುತ್ರ ರಾಮ ಗುಪ್ತನಿಗೆ ಅಧಿಕಾರ ಅಸ್ತಾಂತರಗೊಂಡಾಗ, ಅವನ ಅಸಮರ್ಥತೆಯಿಂದ ಗುಪ್ತ ಸಾಮ್ರಾಜ್ಯದಲ್ಲಿ ನಡೆಯುವ ಅನ್ಯಾಯ, ಪ್ರಜೆಗಳ ಸಂಕಷ್ಟ, ಸಾಮ್ರಾಜ್ಯದ ಭದ್ರತೆಯ ಕಂಟಕ ಈ ಎಲ್ಲಾ ಸನ್ನಿವೇಶಗಳ ಮಿಶ್ರಣವನ್ನೊಳಗೊಂಡಿದೆ "ಧ್ರುವಸ್ವಾಮಿನಿ" ಐತಿಹಾಸಿಕ ನಾಟಕ.

ವಿಶ್ವವಿಖ್ಯಾತನಾದ ಎರಡನೇ ಚಂದ್ರಗುಪ್ತನು ಶಕರಾಜನನ್ನು ವಧಿಸದೇ ಕ್ಷಮಿಸಿ, ಉದಾರತೆ ತೋರುತ್ತಾನೆ. ಆದರೆ ಲಪಂಘನೂ, ಕುಡುಕನೂ, ಕ್ರೂರಿಯೂ ಆದ ರಾಮಗುಪ್ತನು ಶಕರಾಜನನ್ನು ಸೆರೆಯಲ್ಲಿರುವಾಗಲೇ ಕೊಲೆ ಮಾಡಿಸುವುದಲ್ಲದೇ, ತನ್ನ ತಮ್ಮನಾದ ಚಂದ್ರ ಗುಪ್ತನನ್ನೂ ವಧಿಸಲು ಪ್ರಯತ್ನಿಸಿ, ವಿಫಲನಾಗಿ, ತನ್ನ ಪ್ರಾಣವನ್ನು ಕಳೆದುಕೊಳುತ್ತಾನೆ. ಗುಪ್ತ ಸಾಮ್ರಾಜ್ಯದ ಪ್ರಜೆಗಳೆಲ್ಲರೂ ನೆಮ್ಮದಿಯ ನಿಟ್ಟುಸಿರಿನೊಂದಿಗೆ ಚಂದ್ರಗುಪ್ತನನ್ನು ಸಾಮ್ರಾಟನೆಂದೂ, ಧ್ರುವಸ್ವಾಮಿನಿಯನ್ನು ಸಾಮ್ರಾಜ್ಞಿ ಎಂದೂ ಸ್ವೀಕರಿಸುತ್ತಾರೆ. ಪ್ರಜೆಗಳ ಬೇಡಿಕೆಯನ್ನು ಮನ್ನಿಸಿದ ಚಂದ್ರಗುಪ್ತ ಮತ್ತು ಧ್ರುವಸ್ವಾಮಿನಿಯರು ಪತಿ–ಪತ್ನಿಯರಾಗುವುದರೊಂದಿಗೆ ನಾಟಕ ಸುಖಾಂತದಲ್ಲಿ ಮುಕ್ತಾಯವಾಗುತ್ತದೆ. ಕಲಾವಿದರೆಲ್ಲರ ಉತ್ತಮವಾದ ಅಭಿನಯ, ಮಧ್ಯೆ–ಮಧ್ಯೆ ಬರುವ ಸುಶ್ರಾವ್ಯವಾದ ಹಾಡು, ನೃತ್ಯಗಳು ಕಾಲಘಟ್ಟಕ್ಕೆ ಒಪ್ಪುವಂತಹ ವಸ್ತ್ರವಿನ್ಯಾಸ, ಪ್ರಸಾಧನ, ರಂಗ ಪರಿಕರ, ರಂಗ ವಿನ್ಯಾಸಗಳೆಲ್ಲವೂ ನಾಟಕಕ್ಕೆ ಪೂರಕವಾಗಿದ್ದು, ಪ್ರೇಕ್ಷಕರಿಗೆ ಭಾರತದ ಮಹಾನ್ ಸಾಮ್ರಾಜ್ಯವೆನಿಸಿದ ಗುಪ್ತರ ಬಗ್ಗೆ ಸಾಕಷ್ಟು ಮಾಹಿತಿಗಳ ಅರಿವಾಗುತ್ತದೆ ಅದಲ್ಲದೇ ಹತ್ತಾರು ಕಷ್ಟ–ನಷ್ಟ, ದುಃಖ–ದುಮ್ಮಾನಗಳ ವಿಷವರ್ತುಲದಲ್ಲಿ ಸಿಕ್ಕಿಕೊಂಡರೂ ಧೈರ್ಯ, ತಾಳ್ಮೆಗಳಿಂದ ಅವುಗಳೆಲ್ಲವನ್ನು ಮೆಟ್ಟಿ ಹೊರಬಂದ ಧ್ರುವಸ್ವಾಮಿನಿ, ಇಂದಿನ ನಾರಿಯರ ಜೀವನದ ದಾರಿ ದೀಪವಾಗಿ ಗೋಚರಿಸುವುದರೊಂದಿಗೆ 'ಧ್ರುವಸ್ವಾಮಿನಿ' ಐತಿಹಾಸಿಕ ನಾಟಕ ಪ್ರೇಕ್ಷಕರನ್ನು ತಲುಪುವಲ್ಲಿ ಯಶಸ್ವಿಯಾಯಿತು.

ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯೂ ಇದೀಗ ಮಾಧ್ಯಮ ಪಟ್ಟಿಯಲ್ಲಿದ್ದು ಓದುಗರ ಆಶಯ–ಅಭಿಮಾನದಂತೆ ವಿಶೇಷ ಲೇಖನ ಪುರವಣಿ ಕವನ ಸಂಕಲನ ಪ್ರಕಟಿಸಲು ಬಯಸುತ್ತದೆ ಹೆಚ್ಚಿನ ಮಾಹಿತಿಗಾಗಿ ಆಸಕ್ತ ಬರಹಗಾರರು ಸಂಪರ್ಕಿಸಬಹುದಾಗಿದೆ– 9901010109

## 40ಕ್ಕೂ ಹೆಚ್ಚು ಕಡಜ ಕಡಿದು ರೈತ ಸಾವು



ತಿಪಟೂರು: ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ವೇಳೆ ಕಡಜಗಳು ಕಚ್ಚಿದ್ದರಿಂದ ಕಸಬಾ ಹೋಬಳಿಯ ತಡಸೂರು ಗ್ರಾಮದ ರೈತ ಚರಣ್ (43) ಸಾವನ್ನಪ್ಪಿದ್ದಾರೆ.

ರೈತ ಚರಣ್ ಅವರು ಭಾನುವಾರ ಮಧ್ಯಾಹ್ನ ತೋಟದಲ್ಲಿ ಉಳುಮೆ ಮಾಡುತ್ತಿದ್ದರು. ಆಗ 40ಕ್ಕೂ ಹೆಚ್ಚು ಕಡಜಗಳು ಅವರ ಮೇಲೆ ದಾಳಿ ಮಾಡಿವೆ. ತೀವ್ರ ಅಸ್ವಸ್ಥಗೊಂಡಿದ್ದ ಅವರನ್ನು ತಿಪಟೂರು ತಾಲ್ಲೂಕು ಆಸ್ಪತ್ರೆಗೆ ಸೇರಿಸಿ, ಪ್ರಥಮ ಚಿಕಿತ್ಸೆ ಕೊಡಿಸಲಾಗಿತ್ತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಬೆಳಿಗ್ಗೆ ಅವರು ಮೃತಪಟ್ಟಿದ್ದಾರೆ. ಚರಣ್ ಅವರು ತಂದೆ ತಾಯಿ ಜತೆಗೆ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು.

# ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ




ತುಮಕೂರು ಕನ್ನಡ ಮಾಧ್ಯಮ ಮೀಸಲಾತಿ ಚಿಂತನ ಮಂಥನ ಸಮಾವೇಶದಲ್ಲಿ ಕರ್ನಾಟಕ ರಾಜ್ಯದ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆಎಚ್ ಮುನಿಯಪ್ಪರವರ ಆಪ್ತ ಸಹಾಯಕರಾದ ನಟರಾಜುರವರನ್ನು ತುಮಕೂರಿನ ಮಾದಿಗ ಸಮಾಜದ ಹಿರಿಯ ಮುಖಂಡರು ಆದ ಮುಕುಂದರಾಜು ಕಾಂಗ್ರೆಸ್ ಮುಖಂಡ ಗೋಳರಿವೆ ನಾಗರಾಜು ಡಾ ಹನುಮಂತ ರಾಯಪ್ಪ ಮುಂತಾದ ಮಹಾಸಭಾ ಪದಾಧಿಕಾರಿಗಳು ನಟರಾಜುರವರನ್ನು, ತುಮಕೂರಿನಲ್ಲಿ ಸನ್ಮಾನಿಸಿ ಗೌರವಿಸಲಾಯಿತು

# ಇಂತಹ ಅನ್ಯಾಯಗಳನ್ನು ನೋಡಿಕೊಂಡೇ ನಕ್ಸಲೇಟ್ ಗಳು ಬೆಳೆಯೋದು ಕೆ.ಎನ್. ರಾಜಣ್ಣ ಗರಂ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ : ಮಧುಗಿರಿ ಉಪವಿಭಾಗದಲ್ಲಿ ಬರ ಪರಿಸ್ಥಿತಿ ಬಹಳಷ್ಟು ಗಂಭೀರವಾಗಿದೆ. ಮಳೆಯ ಪ್ರಮಾಣ ತೀರ ಕಡಿಮೆಯಾಗಿದ್ದು ಕೃಷಿ ಸ್ಥಗಿತಗೊಂಡಿದೆ. 4 ತಾಲೂಕಿನಲ್ಲಿ ಯಾವುದೇ ಬೆಳೆಯ ಮುನ್ಸೂಚನೆ ಇಲ್ಲ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ ಎಂದು ಡಿಸಿಎಂ ಡಾ.ಜಿ ಪರಮೇಶ್ವರ್ ಮಾಹಿತಿ ನೀಡಿದರು.

ಪಟ್ಟಣದ ತಾ.ಪಂ ಸಭಾಂಗಣದಲ್ಲಿ ಸೋಮವಾರ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಎಲ್ಲ ಬೆಳೆಗಳೂ ಒಣಗಿ ಹೋಗಿವೆ. ವಾರದ ಒಳಗೆ ಮಳೆ ಬಂದರೂ ಯಾವುದೇ ಪ್ರಯೋಜನವಿಲ್ಲ. ಇದಕ್ಕಿಂತಲೂ ಉತ್ತರ ಕರ್ನಾಟಕದಲ್ಲಿ ಪರಿಸ್ಥಿತಿ ಗಂಭೀರವಾಗಿದ್ದು, ಇಲ್ಲೂ ಅದೇ ವಾತಾವರಣ ಇದೆ. ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಬೂಬು ಹೇಳಬಾರದು. ಎಲ್ಲರೂ ಹೊಣೆ ನಿರ್ವಹಿಸಬೇಕು. ಯಾವುದೇ ಸಬೂಬು ಹೇಳುವಂತಿಲ್ಲ. ಯಾವುದೇ ನಿರ್ಲಕ್ಷ್ಯ ಕಂಡು ಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಅಮಾನತ್ತು ಮಾಡಲಾಗುವುದು. ಪ್ರತೀ ವಾರ ಟಾಸ್ಕ್ ಫೋರ್ಸ್ ಸಭೆ ಮಾಡಬೇಕು. ತಹಸೀಲ್ದಾರ್ ಗಳ ಖಾತೆಯಲ್ಲಿ ಸರ್ಕಾರ ಹಣ ಇಟ್ಟಿದ್ದು, 1.16 ಕೋಟಿ ಹಣ ಇಟ್ಟಿದ್ದು, ಈ ಹಣ ತೋರಿಸಿಕೊಳ್ಳಲು ಇಟ್ಟಿಲ್ಲ. ಅವಶ್ಯಕತೆ ಬಂದರೆ ಖರ್ಚು ಮಾಡಲು ಹಣ



ಇಡಲಾಗಿದೆ. ಹಣ ಇಲ್ಲ ಎಂದು ಸರ್ಕಾರದ ಮೇಲೆ ಸುಮ್ಮನೇ ಹೇಳುವುದು ಸರಿಯಲ್ಲ. ವಿಜಿ–ಜಿ ರಾಮ್–ಜಿ ಯೋಜನೆಗೆ ರಾಜ್ಯ ಸರ್ಕಾರದಿಂದಲೇ ಹಣ ನೀಡುತ್ತೇವೆ. ಜನರಿಗೆ ಕೆಲಸ ನೀಡಿ ಗುಳೆ ಹೋಗುವುದನ್ನು ತಪ್ಪಿಸಿ, ಎಲ್ಲ ಶಾಸಕರ ಕ್ಷೇತ್ರಗಳಿಗೂ ಒಂದು ಕೋಟಿ ನೀಡಲಾಗಿದೆ. ತುಮಕೂರು ಜಿಲ್ಲಾಧಿಕಾರಿಗಳ ಖಾತೆಯಲ್ಲಿ 13 ಕೋಟಿ ಇದೆ ಈ ಹಣವನ್ನು ಉಪಯೋಗಿಸಿಕೊಂಡು ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿ ಎಂದು ಸೂಚನೆ ನೀಡಿದರು.

ಜಲಜೀವನ್ ಮಿಷನ್ ಸಂಪೂರ್ಣ ವಿಫಲವಾಗಿದೆ. ಜಿಲ್ಲೆಯಲ್ಲಿ ನಮ್ಮ ತಾಲೂಕಿನಲ್ಲಿ ಎಲ್ಲೆಂದರಲ್ಲಿ ಗುಂಡಿಗಳನ್ನು ತೋಡಿ ರಸ್ತೆ ಹಾಳು ಮಾಡಿಹೋಗಿದ್ದಾರೆ. ಜಲ ಜೀವನ್ ಮಿಷನ್ ಎಲ್ಲಿ ಸಕ್ಸಸ್ ಆಗಿದೆ ಎಂದು ತೋರಿಸಿ ನಮ್ಮ ಜಿಲ್ಲಾ ಮಂತ್ರಿಗಳು ನೋಡಿ ಖುಷಿಯಾಗುತ್ತಾರೆ...ಸಕ್ಸಸ್ ಆಗಿದೆ ಎಂದು ನಮಗೆ ತೋರಿಸಿ ನೀವು ಕೇಳಿದ ಬಹುಮಾನ ನೀಡುತ್ತೇವೆ. ಎಲ್ಲ ಕಡೆ ರೋಡ್ ಕಟ್ ಮಾಡಿ ಮಣ್ಣು ತುಂಬಿ ಹೋಗಿದ್ದಾರೆ. ಏಜೆನ್ಸಿಯವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದರೆ ಅವರಿಗೆ ಬಿಲ್ ಯಾಕೆ ನೀಡಬೇಕು...ಏಜೆನ್ಸಿ ರದ್ದು ಮಾಡಿ ವಿಫಲವಾಗಿರುವ ಘಟಕಗಳಿಗೆ ನಿರ್ವಹಣೆ ಹಣ ಏಕೆ ನೀಡಬೇಕು...ಪ್ರತೀ ತಿಂಗಳು 3 ಸಾವಿರ ನಿರ್ವಹಣಾ ವೆಚ್ಚ ನೀಡುತ್ತಿದ್ದೀರ... ಒಂದು ತಾಲೂಕಿನಲ್ಲಿ 200 ಎಂದುಕೊಂಡರೂ 10 ತಾಲೂಕಿನಿಂದ ಸುಮಾರು 6 ಕೋಟಿ ನಿರ್ವಹಣಾ ಹಣ ನೀಡುತ್ತಿದ್ದೀರ...ಯಾರ ದುಡ್ಡು ಎಂದು ನೀಡುತ್ತಿದ್ದೀರ...ಸಿರಾ ತಾಲೂಕಿನಲ್ಲಿ ಜಲಶ್ರೀ ಎಂಬ ಖಾಸಗಿ ಏಜೆನ್ಸಿಯವರಿಗೆ 60 ಲಕ್ಷ ನೀಡುತ್ತಿದ್ದೀರ ಇಂತಹ ಅನ್ಯಾಯಗಳನ್ನು ನೋಡಿಕೊಂಡೇ ನಕ್ಸಲೇಟ್ ಗಳು ಬೆಳೆಯೋದು ಎಂದು ಶಾಸಕ ಕೆ.ಎನ್. ರಾಜಣ್ಣ ಜಲಜೀವನ್ ಅಧಿಕಾರಿಗಳ ಮೇಲೆ ಕೆ.ಎನ್. ರಾಜಣ್ಣಂ ಆದರು. ನಿಮ್ಮಷ್ಟು ಸುಳ್ಳು ಹೇಳುವ ಇಂಜಿನಿಯರ್ ಗಳೂ ಯಾರೂ ಇಲ್ಲ. ಏನು ತಮಾಷೆ ಮಾಡಿಕೊಂಡಿದ್ದೀರ. ಒಂದು ದಿನವಾದರೂ ಸರಿಯಾದ ಮಾಹಿತಿ ನೀಡಿದ್ದೀರ..ಒಂದೊಂದು ಕಡೆ ಒಂದೊಂದು ಮಾಹಿತಿ ನೀಡಿದ್ದೀರ ಯಾವ ಡೇಟಾ ನಾವು ನಂಬಬೇಕು. ಪಾವಗಡದಲ್ಲೇ 70 ಶುದ್ಧಕುಡಿಯುವ ನೀರಿನ ಘಟಕಗಳು ಕೆಟ್ಟು ನಿಂತಿವೆ ಆದರೆ ಜಿಲ್ಲಾದ್ಯಂತ ಕೇವಲ 62 ಎಂದು ನೀಡುತ್ತೀರ.. 1325 ಗ್ರಾಮಗಳಲ್ಲಿ ಜಲ ಜೀವನ್ ಮಿಷನ್ ಯೋಜನೆ ಮಾಡಲಾಗಿದೆ ಎಂದು ಹೇಳಿದ್ದೀರಾ.. ಆದರೆ412 ಗ್ರಾಮದಲ್ಲಿ ಪ್ರಾರಂಭವೇ ಮಾಡಿಲ್ಲ ಅನೇಕ ಕಡೆ ಕೆಟ್ಟು ಹೋಗಿವೆ. ಕೆಲ ಕಡೆ ನೀರೇ ಬರುವುದಿಲ್ಲ. 1325 ಗ್ರಾಮಗಳಲ್ಲಿ ಬಗ್ಗೆ ಎಷ್ಟು ಕಡೆ ನೀರು ಬರುತ್ತಿವೆ ಎಂಬ ಅಪ್ಡೇಟ್ ನೀಡಬೇಕು. 2024 ಕ್ಕೆ ಯೋಜನೆ ಮುಗಿಯಬೇಕು 4 ವರ್ಷ ಮುಂದುವರೆಸಿದರೂ ಏನೂ ಆಗಿಲ್ಲ. 2022 ಕ್ಕೆ ಯೋಜನೆ ಪ್ರಾರಂಭವಾಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಯಾರು ಸರಿಯಾಗಿ ಸ್ಪಂದಿಸುತ್ತಿಲ್ಲ ಅವರನ್ನು ಬ್ಲಾಕ್ ಲೀಸ್ಟ್ ಗೆ ಹಾಕಿ ಎಂದು ಈಗಾಗಲೇ ಸೂಚನೆ ನೀಡಿದ್ದೇನೆ ಆದರೂ ಯಾವುದೇ ಪ್ರಯೋಜನವಾಗಿಲ್ಲ. ಶುದ್ಧಕುಡಿಯುವ ಘಟಕಗಳು ಕೆಟ್ಟು ಹೋದಾಗ, ಜೆಜೆಎಂ ಬರುತ್ತಿದೆ ನೀರು ಕೊಡುತ್ತೇವೆ ಎಂದು ಹೇಳಿದ್ದೀರಾ...ಈಗ ಜೆಜೆಎಂ ಸಹ ವಿಫಲವಾಗಿದೆ ಹೀಗಾದರೆ ಹೇಗೆ..? ಜನಕ್ಕೆ ಹೇಗೆ ನೀರು ಕೊಡುತ್ತೀರಾ ಎಂದು ಅಸಮಾಧಾನ ಡಿಸಿಎಂ ಪರಮೇಶ್ವರ್ ಅಸಮಾಧಾನ ವ್ಯಕ್ತಪಡಿಸಿದರು. ಇನ್ಶೂರೆನ್ಸ್ ಕವರೇಜ್ ಗೆ ನಿಮ್ಮ ಕ್ರಮ ಏನು...? ಎಂದು ಶಾಸಕ ರಾಜಣ್ಣ ಕೇಳಿದಾಗ, ಯಾವ ಕಂಪನಿಗೆ ಇನ್ಶೂರೆನ್ಸ್ ನೀಡಿದ್ದೀರೋ ಅದರ ಬಗ್ಗೆ ಆಸಕ್ತಿ ವಹಿಸಿದಾಗ ರೈತರಿಗೆ ಹಣ ಬರುತ್ತದೆ.

## ವಿದ್ಯುತ್ ಮಾರ್ಗ ನಿರ್ಮಾಣ ಕಾಮಗಾರಿ : ಎಚ್ಚರದಿಂದಿರಲು ಸಾರ್ವಜನಿಕರಲ್ಲಿ ಮನವಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು; ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಜಿಲ್ಲೆಯ ಮಧುಗಿರಿ ತಾಲ್ಲೂಕು ಐ.ಡಿ.ಹಳ್ಳಿ ಹೋಬಳಿ ಗರಣಿ ಗ್ರಾಮದಲ್ಲಿ ಉದ್ದೇಶಿತ 2*20 ಎಂ.ವಿ.ಎ., 66/11 ಕೆವಿ ವಿದ್ಯುತ್ ಉಪಸ್ಥಾವರ ಮತ್ತು ಹಾಲಿ ಇರುವ 66 ಕೆವಿ ಮಿಡಿಗೇಶಿ–ಐ.ಡಿ.ಹಳ್ಳಿ ಏಕಮುಖ ಮಾರ್ಗದಿಂದ ಉದ್ದೇಶಿತ 2*20 ಎಂ.ವಿ.ಎ., 66/11 ಕೆವಿ ಗರಣಿ ವಿದ್ಯುತ್ ಉಪಸ್ಥಾವರದವರೆಗೆ 1.650 ಕಿ.ಮೀ. ಉದ್ದದ 66 ಕೆವಿ ಲಿಲೋ ಪ್ರಸರಣ ಮಾರ್ಗ ನಿರ್ಮಾಣ ಮಾಡಿರುವ ಕಾಮಗಾರಿಯನ್ನು ಆಗಸ್ಟ್ 13ರಂದು ಅಥವಾ ತದನಂತರ ವಿದ್ಯುದ್ದೀಕರಣಗೊಳಿಸಲಾಗುವುದು. ಈ ಪ್ರಸರಣ ಮಾರ್ಗಗಳು ಜಿಲ್ಲೆಯ ಮಧುಗಿರಿ ತಾಲ್ಲೂಕು ಐ.ಡಿ.ಹಳ್ಳಿ ಹೋಬಳಿ, ಗರಣಿ ಗ್ರಾಮದ ಸರಹದ್ದಿನಲ್ಲಿ ಹಾದು ಹೋಗಿದ್ದು, ವಿದ್ಯುತ್ ಮಾರ್ಗ ಹಾದು ಹೋಗಿರುವ ಗ್ರಾಮಗಳಲ್ಲಿ ಸಾರ್ವಜನಿಕರು ಗೋಪುರಗಳನ್ನು ಹತ್ತುವುದಾಗಲೀ, ಲೋಹದ ತಂತಿ, ಹಸಿರು ಬಳ್ಳಿ, ಕೊಂಬೆ ಇತ್ಯಾದಿಗಳನ್ನು ವಿದ್ಯುತ್ ಪ್ರವಹಿಸುವ ತಂತಿಗಳಿಗೆ ಎಸೆಯುವುದಾಗಲೀ ಅಥವಾ ದನ–ಕರುಗಳನ್ನು ಗೋಪುರಗಳಿಗೆ ಕಟ್ಟುವುದಾಗಲಿ ಮಾಡಬಾರದು. ಆಗಸ್ಟ್ 13ರಂದು ಅಥವಾ ತದನಂತರವೂ ಕೂಡ ಯಾರಾದರೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅಪಘಾತಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಯಾವುದೇ ರೀತಿಯಲ್ಲೂ ಜವಾಬ್ದಾರಿಯಾಗುವುದಿಲ್ಲ ಎಂದು ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

# ಕುಣಿಗಲ್ ತಾಲ್ಲೂಕು : 2 ತಿಂಗಳ ಪಡಿತರ ವಿತರಣೆ

ತುಮಕೂರು; ಕುಣಿಗಲ್ ತಾಲ್ಲೂಕು ಪಡಿತರ ಚೀಟಿದಾರರಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯ ಎರಡು ತಿಂಗಳ ಪಡಿತರವನ್ನು ಒಟ್ಟಿಗೆ ಆಗಸ್ಟ್–2026ರ ಮಾಹೆಯಲ್ಲಿ ವಿತರಿಸಲಾಗುವುದು ಎಂದು ಕುಣಿಗಲ್ ತಾಲ್ಲೂಕು ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿ ಅಂತ್ಯೋದಯ ಪಡಿತರಚೀಟಿ(ಎಎವೈ)ಗೆ ಮಾಹೆಯಾನ 21 ಕೆ.ಜಿ.ಯಂತೆ 42 ಕೆ.ಜಿ. ರಾಗಿ ಹಾಗೂ 14 ಕೆ.ಜಿ.ಯಂತೆ 28 ಕೆ.ಜಿ. ಅಕ್ಕಿಯನ್ನು ವಿತರಣೆ ಮಾಡಲಾಗುವುದು.

ಆದ್ಯತಾ(ಕೇಂದ್ರ) ಪಡಿತರ ಚೀಟಿ(ಪಿ.ಹೆಚ್.ಹೆಚ್.)ಯ ಪ್ರತಿ ಸದಸ್ಯರಿಗೆ ಮಾಹೆಯಾನ 3 ಕೆ.ಜಿ.ಯಂತೆ 6 ಕೆ.ಜಿ. ರಾಗಿ ಹಾಗೂ 2 ಕೆ.ಜಿ.ಯಂತೆ 4 ಕೆ.ಜಿ. ಅಕ್ಕಿಯನ್ನು ವಿತರಣೆ ಮಾಡಲಾಗುವುದು.

ಆದ್ಯತಾ(ರಾಜ್ಯ) ಪಡಿತರ ಚೀಟಿ(ಪಿ.ಹೆಚ್.ಹೆಚ್.)ದಾರರಿಗೆ ರಾಗಿ ಹಂಚಿಕೆ ಇರುವುದಿಲ್ಲ ಹಾಗೂ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ ಮಾಹೆಯಾನ 5 ಕೆ.ಜಿ.ಯಂತೆ ಒಟ್ಟು 10 ಕೆ.ಜಿ. ಅಕ್ಕಿಯನ್ನು ವಿತರಣೆ ಮಾಡಲಾಗುವುದು.

ಕುಣಿಗಲ್ ತಾಲ್ಲೂಕಿನ ಪಡಿತರ ಚೀಟಿದಾರರು ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಗೆ ಸಂಬಂಧಿಸಿದ 2 ತಿಂಗಳ ಪಡಿತರವನ್ನು ಆಗಸ್ಟ್–2026ರ ಮಾಹೆಯಲ್ಲಿಯೇ ಒಟ್ಟಿಗೆ ಪಡೆಯಬೇಕಾಗಿರುವುದರಿಂದ ಕಡ್ಡಾಯವಾಗಿ 2 ಬಾರಿ ಬಯೋಮೆಟ್ರಿಕ್ ನೀಡಿ ಪಡಿತರವನ್ನು ಪಡೆಯಬೇಕು. ಪಡಿತರ ಚೀಟಿದಾರರು ಯಾವುದೇ ಗೊಂದಲಕ್ಕೆ ಒಳಗಾಗಬಾರದೆಂದು ಅವರು ತಿಳಿಸಿದ್ದಾರೆ.

